ಹಬ್ಬಿರಳು



ಗೋವಿಂದ ಪೈ

ಪ್ರಕಾಶಕರು:
ಬಾಳಿಗಾ ಎಂಡ್ ಸನ್ಸ್, ರಥಬೀದಿ, ಮಂಗಳೂರು.

Awarded by,

The Proprietor,

Baliga & Sons

To,

K. Veena

Form V

ಹೆಬ್ಬೆರಳು

ನಾಟಕ

ಗೋವಿಂದ ಪೈ
ಮಂಜೇಶ್ವರ

1946

ಬೆಲೆ:—ರೂ. ೦—೮—೦. 0140

ಪ್ರಕಾಶಕರು:—
ಬಾಳಿಗಾ ಎಂಡ್ ಸನ್ಸ್, ರಥಬೀದಿ, ಮಂಗಳೂರು.

PRINTED AT THE
BASEL MISSION PRESS, MANGALORE,
P. I. C. Q. H. NO. 1—7-9-'46.

ಯಾರ ಹಿತವಚನಗಳನ್ನು ಅಲ್ಲಗಳೆದು,
ಯಾರಿಗೆ ಪದೇಪದೇ ಅಡ್ಡನುಡಿದು
ಮನನೋಯಿಸಿದೆನೊ,

ಆ ನನ್ನ ಸಾಕುತಾಯಿ

ವೈ. ವಾ.

ಶ್ರೀಶ್ರೀ ಸುಬ್ಬಮ್ಮನವರ

(೧೮೫೨—೧೯೦೮)

ಆಕ್ಕರೆಯ ನೆನವಿಗೆ

ಪಶ್ಚಾತ್ತಾಪದ ಕಾಣಿಕೆ

ಮುನ್ನುಡಿ

ಇಂದಿಗೆ ೧೫ ವರ್ಷಗಳ ಹಿಂದೆ ೧೯೩೧ರಲ್ಲಿ ಗೊಲ್ಗೊಥಾ ಎಂಬ ಖಂಡಕಾವ್ಯವನ್ನು ಬರೆದಂದಿನಿಂದ ಈ ವರೆಗೆ ಕೆಲಕೆಲವು ವೈಣಿಕ ಗೀತ ಗಳನ್ನೂ ಚತುರ್ದಶಪದಿಗಳನ್ನೂ ವಿನಾ ಸಾಕಷ್ಟು ದೀರ್ಘ ಕಾವ್ಯಗಳನ್ನು, ರಚನೆಯಲ್ಲಿ ಸರ್ವಥಾ ಉಪೇಕ್ಷೆಯಿಂದಲ್ಲ, ಇತರ ಒತ್ತಾಯದ ಕೆಲಸಗಳ ನಿರ್ಬಂಧದಿಂದ ಆ ಕಡೆ ಮನಸ್ಸು ಹಾಕಲಿಕ್ಕೆ ಬೇಕಾದಷ್ಟು ಅವಕಾಶ ದೊರೆಯದೆ ಅಥವಾ ಸಾಲದೆ, ರಚಿಸಿಲ್ಲದುದರಿಂದ ಅವನ್ನು ಬರೆಯತಕ್ಕ ಸೂಲಷ್ಟೇ ತಪ್ಪಿದೆಯೊ, ಅಲ್ಲ ಕೆಯ್ವಾಡವೂ ಬರಡಾಗಿದೆಯೊ ನೋಡೋಣ ಎಂದು ಈ ನಾಟಕವನ್ನು ಬರೆದಿರುತ್ತೇನೆ.

ಈ ನಾಟಕದ ಕಥಾವಸ್ತುವಿನ ಬಗ್ಗೆ ಮಹಾಭಾರತದ ಆದಿಪರ್ವ ದಲ್ಲಿಯ (ಅಧ್ಯಾಯ ೧೪೨) ಏಕಲವ್ಯಾಖ್ಯಾನವನ್ನು ಆಧರಿಸಿದೆಯಾದರೂ ಅಲ್ಲಿಯ ಕಥೆಯನ್ನೇ ಇಲ್ಲಿ ಮಕ್ಕಾಮಕ್ಕಿಯಾಗಿ ಅನುವರ್ತಿಸಿಲ್ಲ, ಅದನ್ನು ಬೇಕಾದಂತೆ ಮಾರ್ಪಡಿಸಿದೆ. ಇದರ ೧ನೆಯ ನೋಟದಲ್ಲಿ (ಬಂತಿ ೩೮–೩೯).

ಮಾವನಂ ಮಡುಹಿದಾ ವಾಸುದೇವಂ ಕಪ್ಪಲಾ ಕೃಷ್ಣ?

ಎಂದಿರುವಲ್ಲಿ ಕಾಲವಿರೋಧವಿಲ್ಲ, ಅತ ಏವ ಅದು ಸರ್ವಥಾ ಅಸಂಗತವಲ್ಲ. ಏಕೆಂದರೆ ಈ ನಾಟಕದ ಪಾತ್ರಪರಿಚಯದಲ್ಲಿ ಅರ್ಜುನನ ವಯಸ್ಸು ೧೬ ವರ್ಷ ಎಂದಿರುವುದರಿಂದ, ಅವನಿಗಿಂತ ಕೆಲವೇ ತಿಂಗಳಿಗೆ ಹಿರಿಯನೆಂಬ ಶ್ರೀಕೃಷ್ಣನಿಗೂ ಆಗ್ಗೆ ಅಷ್ಟೇ ಪ್ರಾಯ, ಕೃಷ್ಣನು ತನ್ನ ಹೆಚ್ಚುಕಡಿಮೆ ೧೨ ನೆಯ ವರ್ಷದಲ್ಲಿ ಕಂಸನನ್ನು ಕೊಂದನೆಂದೂ ಅನಂತರ ತಾನೆ ಅವನ ಉಪನಯನವಾಯಿತೆಂದೂ ಪುರಾಣಗಳಿಂದ ಪ್ರತೀತವಿದೆ; ಹೀಗಾಗಿ ಅಲ್ಲಿಂದ ೪ ವರ್ಷಗಳೆಂದರೆ ಆ ಸುದ್ದಿ ಸುತ್ತುಮುತ್ತಲೇ ಏಕೆ, ಬಹಳ ದೂರಕ್ಕೂ ಹಬ್ಬಲಿಕ್ಕೆ ಸಾಕಷ್ಟಾಯಿತು.

Chorus (ಗೊಂದಳನವರು) ಗ್ರೀಕ ನಾಟಕಗಳಲ್ಲೇ ಅಲ್ಲ, ಜಪಾನಿನ ನೋ *(Noh)* ನಾಟಕಗಳಲ್ಲೂ ಇದೆ. ನೋ ನಾಟಕಗಳು ಗ್ರೀಕ ನಾಟಕಗಳಷ್ಟು ನಿಡಿದಾಗಿಲ್ಲ, ಚಿಕ್ಕವಿವೆ. ಈ ನಾಟಕ ಉದ್ದದಲ್ಲಿ ಅವಕ್ಕೂ ಇವಕ್ಕೂ ನಡುವಲ್ಲಿದೆ.

Chorus ಎಂಬ ಗ್ರೀಕ ಪಾರಿಭಾಷಿಕ ಶಬ್ದವನ್ನು ಇತರ ರಚಕ

ಮಹಾಶಯರು ಮೇಳ ಎಂದು ಕನ್ನಡಿಸಿರುವಲ್ಲಿ ನಾನೇಕೆ ಗೊಂದಳದವ
ಎಂದೆ? ಎಂದು ಸಹಜವಾಗಿ ಕೇಳಬಹುದು. ಆದರ ಸಮಾಧಾನ ಹೀಗದೆ

Chorus ಎಂಬ ಗ್ರೀಕ ಪದಕ್ಕೆ *'a dance in a ring, circling dance'*, ಅಂದರೆ ಮಂಡಲನೃತ್ಯ, ಸುತ್ತುವರಿವ ಕುಣಿತ ಎಂ
ಅರ್ಥ. ರನ್ನನ ಅಜಿತಪುರಾಣದಲ್ಲಿ (ಆಶ್ವಾಸ ೫),

. . ಸುರಕಾಂತೆಯರ್ ದಿನಿಜರಾಜನ ತೋಳ್ಗಳ ಮೇಲೆ ನಿಂದು ಗೊಂ
ದಳದೆ ವಿಚಿತ್ರ ನರ್ತನವಿಳಾಸಮನಾಡೆ . . . . . ॥ ೧೭

ಹಾಗೂ

. . . . . ಇಂದ್ರಸ್ತ್ರೀಯರಾನಂದದಿಂ ಗೊಂ
ದಳದೆ ಕುಣಿದು ಲೀಲಾನೃತ್ಯದಿಂ ಕಣ್ಗೆ ವಂದರ್ ॥ ೪೧

ಎಂಬಲ್ಲಿಯ ಗೊಂದಳದ ನರ್ತನ, ಗೊಂದಳದ ನೃತ್ಯವು ಮಂಡಲನೃತ್ತ *choral dance* ತಾನೆ ಎಂದು ಪ್ರತ್ಯಕ್ಷವಿದೆ. ನಮ್ಮ ತುಳುನಾಡಿನ ಹರಕೆಗಾಗಿಯೂ ಬಳಕೆಯಾಗಿಯೂ ಗೊಂದಳಪೂಜೆ ಎಂದು ಮಾಡಿಸು ದುಂಟು; ಕರ್ಣಾಟಕದಲ್ಲಿ ಇತರತ್ರವೂ ಈ ಸಂಪ್ರದಾಯವಿದ್ದಿರಬಹುದ ಅದರಲ್ಲಿ ಗೊಂದಳದವರು ಹಾಡುತ್ತ ಕುಣಿಯುತ್ತ ನಡುವೆ ಇಟ್ಟ ದಿ ವನ್ನು ಸುತ್ತಿಸುತ್ತಿ ಬರುತ್ತಾರೆ. ಗೊಂದಳಪೂಜೆ ಎಂದರೆ *chor worship*. ಹೀಗೆ ಗೊಂದಳ ಎಂದರೆ ಮಂಡಲ ನೃತ್ಯವೆಂದು ಸ್ಪಷ್ಟವಾ ತಿಳಿವುದರಿಂದ, *Chorus* ಎಂಬುದಕ್ಕೆ ಗೊಂದಳದವರು ಎನ್ನುವುದೇ ನ ನೇರೆನಿಸಿತು.

ಈ ನಾಟಕದಲ್ಲಿಯ ೯ ಚೌಪದಿಗಳು (ನೋಟ ೧: ಬಂ. ೧— ೫೫—೮೮, ಇ.) ಇದರ ಮಿಕ್ಕ ಬಹು ಭಾಗ ರಚಿಸಲ್ಪಟ್ಟ ಹಾಗೂ ನ ಗೊಲ್ಲೊಥದ ಮುನ್ನುಡಿಯಲ್ಲಿ ನಾನು ಝಂಪೆ ಎಂದ, ಇತರರು ಸರಳ ರ ಎಂಬ, ಆ ಛಂದಸ್ಸಿನಲ್ಲಿಲ್ಲ, ಬೇರೆಯೇ ಒಂದು ಛಂದಸ್ಸಿನಲ್ಲಿವೆ. ಹಿಂ ಕಾವ್ಯಗಳಲ್ಲಿ ಛಂದ ಎಂದಿರುವ ಈ ಚತುಷ್ಪದೀ ಛಂದಸ್ಸನ್ನು ಅವುಗಳಿ (ಉದಾ. ತುಲಸೀದಾಸನ ರಾಮಾಯಣದ ಬಾಲಕಾಂಡದಲ್ಲಿ ಛಂ ೨೯—೩೨) ಎತ್ತಿಕೊಂಡದೆ.

ಮಂಜೇಶ್ವರ
ವ್ಯಯ ಸಂ ಶ್ರೀರಾಮನವಮಿ
೧೦ ಏಪ್ರಿಲ್ ೧೯೬೬.

ಗೋವಿಂದ ಪೈ.

ಹೆಬ್ಬೆರಳು

ಪಾತ್ರಗಳು.

ಏಕಲವ್ಯ (೧೨ ವರ್ಷ ವಯಸ್ಸು).
ಹಿರಣ್ಯಧನು—ಏಕಲವ್ಯನ ಸಾಕುತಂದೆ.
ದ್ರೋಣಾಚಾರ್ಯ.
ಅರ್ಜುನ (೧೬ ವರ್ಷ ವಯಸ್ಸು).
ಗೊಂದಳದವರು.

ನೋಟ ೧.

ಹಸ್ತಿನಾವತಿಯಿಂದ ಹೆಚ್ಚು ಕಡಿಮೆ ೧೦ ಗಾವುದ ದೂರದ ಗಂಗೆಯ ತಡಿಯಲ್ಲಿ ಭಿಲ್ಲರದೊಂದು ಹಳ್ಳಿಗಾಡು. ಅಲ್ಲಲ್ಲಿ ಕೆಲಕೆಲವು ಹುಲ್ಲು ಹೊದಿಸಿದ ಮನೆಗಳು ಅವುಗಳ ಮುಂದೆ ಆಕಳೂ ಕುರಿಯಾಡುಗಳೂ ಮೇಯುತ್ತಲೂ ಮಾಡುಗಳ ಮೇಲೆ ಪಾರಿವಾಳಗಳು ಗುಬ್ಬಳಿಸುತ್ತಲೂ ಇವೆ. ಅಲ್ಲಲ್ಲಿ ನಾಯಿಗಳೂ ಬೆಕ್ಕುಗಳೂ ಚಳಿಕಾಸಿಕೊಳ್ಳುತ್ತವೆ. ದೂರದಲ್ಲಿ ಬಿಲ್ಲಂಬುಗಳನ್ನು ಮಾಡುವ ಕಮ್ಮಾರ ಸಾಲೆಯಲ್ಲಿ ತಿದಿಯೊತ್ತುವ ಬೆಂಕಿ ಭುಗ್‌ಭುಗ್ ಎನ್ನುತ್ತದೆ. ಅದಕ್ಕೆ ಈಚೆ ಕೆಲ ಭಿಲ್ಲ ಹೆಂಗಸರು ಹೆದೆಗಳನ್ನು ಹೊಸೆಯುತ್ತಾರೆ, ಕೆಲವರು ರಾಟೆಯಲ್ಲಿ ನಾರನ್ನು ನೂಲುತ್ತಾರೆ. ಅದಕ್ಕೂ ಈಚೆ ಒಂದು ಉಪ್ಪರಿಗೆಯ ಮನೆ. ಅದರ ಮುಂದೆ ಒಂದು ಆಲದ ಕಟ್ಟೆ. ಏಕಲವ್ಯನು ಸಿಳ್ಳು ಹಾಕುತ್ತಲೂ ಬಿಲ್ಲಿನ ಹೆದೆ ಮೀಟುತ್ತಲೂ ಬರುವನು. ಗೊಂದಳದವರು ಮತ್ತೊಂದು ಪಕ್ಕದಿಂದ ಬರುವರು. ಹೊತ್ತು ಮುಂಜಾವ.

ಏಕಲವ್ಯ

ನೆಗೆವಕ್ಕಿಯ ಬಾಣದಿ ಹಾರುವ ತಾಣದಿ ಕಾಲ ಬುಡಕೆ ನಾ ಕೆಳಗಿಸುವೆ,
ಈದಿಹ ಕೇಸರಿಯಾ ಹಲ ಮೊಲೆಮರಿಯಾ ಎಳತರುತವನಾಂ ಪಳಗಿಸುವೆ!
ಸೆಳೆನೀರಿನ ಕುಲ್ಲೆಯೊಳೊಂದೇ ಭಲ್ಲೆಯೊಳೆಳೆಸಿಲೆಯನಿಕ್ಕಡಿಗೆಯ್ವೆ,
ಗೆಳೆಯರ ಕೆಯ್ಯಲ್ಲಿಯ ಮಿಣ್ಣನೆ ನೆಲ್ಲಿಯನಸಿಯಲಿ ಕೆಯ್ತಗಲದೆ ಕೊಯ್ವೆ!

(ಸಿಳ್ಳು ಹಾಕುತ್ತ)

ಸುಸು ಸೂಸೂ ಸೂಸೂ ಸುಸುಸೂ ಸೂಸೂ ಸುಸುಸೂ ಸೂಸೂ ಸೂ
ಸೂ ಸೂ,

(ಹೆದೆ ಮಾಟುತ್ತ)

ರುರು ರೂಂರೂಂ ರೂಂರೂಂ ರುರುರೂಂ ರೂಂರೂಂ ರುರುರೂಂ
ರೂಂರೂಂ ರೂಂ ರೂಂ ರೂಂ

ಇನಿತೆಲ್ಲವಂ ತಂದೆಯಿಂ ಕಲಿತೆನಿನ್ನೆನಿತೊ
ಕಲಿಯಲಿಹುದೆನಗೆ! ಮರಿಹುಲಿಗೆ ಸಾಜದ ಬಣ್ಣ
ಬಹ ಮುನ್ನ ಬಸಿರು ನೋವಂತಲಾ ಮನಮೆನ್ನ
ಕಡುಗುತಿದೆ ತಂದೆಯಾರದ ಬಿಲ್ಲುಗಾರಿಕೆಯ
ಕಲಿಯೆ! ಕೇಳಿಸುತಲಿದೆ ಬಿಲ್ಲೋಜನಂತೆ, ಕುರು
ಕುಲದ ಮಕ್ಕಳಿಗೆ ಬಿಲುವಿದ್ಯೆ ಕಲಿಸುವನಂತೆ,
ಮೇಣವರನೆನಿತೆನಿತೊ ಕೆಯ್ದುಗಳ ಕೆಯ್ತದಲಿ
ನುರಿಸಿರುವನಂತೆ—

ಗೊಂದಳ

ಮೇಣಿನ್ನು ಕೇಳಿಸುತಲಿದೆ,
ಕುರುಕುವರರೊಮ್ಮೆ ಇಸುತಿರುವ ಚಕ್ಕಳದೆರಳೆ
ತೂಳಿ ಬಾವಿಯೊಳುರುಳಲದುವೆ ದಾರಿಯೆ ವೋಪ
ನವನದಂ ಕಂಡಮಮ ಪುಂಖಾನುಪುಂಖ ಶರ
ಸಂಧಾನದಿಂದದನ್ನವಯವದೆ ತೆಗೆದೀಯೆ,
ಬಾಲರಾ ಸುದ್ದಿಯಂ ಗಾಂಗೇಯಗರುಹುವುದೆ
ಆತನಂ ಕರತರಿಸಿ ನೂರರುವರರ್ಭಕರ
ನವನಿಗೊಪ್ಪಿಸಿ ಶಸ್ತ್ರವಿದ್ಯೆಗೊವಜಂ ಕಣಾ
ನೀನಾಗು, ನಿನ್ನೊಲಿವರೆಲ್ಲರಂ ನಿಪುಣಿಸಾ
ಎಂದವನ ಕುರುಕುಲದ ಶಸ್ತ್ರಾಗಮಾಚಾರ್ಯ
ನಾಗಿಸಿಹನಂತೆ.

ಏಕಲವ್ಯ

ಹೆಸರೇನು?

ಗೊಂದಳ

ದ್ರೋಣಾಚಾರ್ಯ.

ಏಕಲವ್ಯ

ಆಃ ತೊಗಲ ಚಿಗರಿಯನ್ನಂತೆತ್ತಿದನೆ? ಅವನೆ
ಬಿಲ್ಲಾಯ್ತುರಲಿ ಗಡ ಪಿನಾಕಿ! ಗಡ ಭಾರ್ಗವಂ!
ಕಲಿವೊಡವನೊಳೆ ಕಲಿಯಬೇಕಸ್ತ್ರವಿದ್ಯೆಯಂ!
ಏ ಮರೆತೆ ಹೆಸರನವನೊಳೆ ಕಲಿವೆನೆಂದೆನ್ನ
ತಂದೆಗೆಂದಿಹೆನಾಣತಿಯ ಕಾವೆ.

ಗೊಂದಳ

ಇದೊ ಬಂದ!

(ಚಂತಾಕ್ರಾಂತನಾದ ಹಿರಣ್ಯಧನುವಿನ ಪ್ರವೇಶ)

ಏಕಲವ್ಯ

ಏನಾಣತಿಯೊ ತಾತ? ಬೇಟೆ ಮೂಸಿದ ನಾಯಿ
ತುಯ್ಯುತುಯ್ಯುತ ಹಾಸು ತಿವಿಯಲೂಳಿಡುವಂತೆ
ಎನ್ನ ಮನಸವನ ಕಡೆಗೆಳೆಯುತಿದೆ, ಆತನೊಳೆ
ಕಡುವಿಲ್ಲನಾಗಬೇಕೆನಿಸುತಿದೆ.

ಹಿರಣ್ಯಧನು

ಎಲೆ ಮರುಳೆ,
ಮೊದಲೆ ಆರ್ಯಂ, ಮೇಲೆ ಪಾರ್ವನಾತಂ, ನಮಗೆ
ಕರಿಯ ಭಿಲ್ಲರನಾರ್ಯರಿಗೆ ವಿದ್ಯೆ ಹೇಳುವನೆ?
ಹದ್ದು ಗುಬರಿಪುದೆ ಕಬ್ಬಕ್ಕಿ ಮರಿಯಂ? ಗೆಣಸು
ಗೂರುವಂತೆಕ್ಕಲಂ ಜಾಡಿಸದೆ ಬಿಡ ನಿನ್ನ!

ಏಕಲವ್ಯ

ಆರ್ಯರಲಿ ಕರಿಯರಿಲ್ಲೇನಮ್ಮ? ಮಾವನಂ
ಮಡುಹಿದಾ ವಾಸುದೇವಂ ಕಪ್ಪಲಾ ಕೃಷ್ಣ?

ಗೊಂದಳ

ಮೇಣನಾರ್ಯತಿಯ ಮಗ ವಿದುರನಿಗೆ ಬಿಲ್ಲೆಸುಗೆ
ಕಲಿಸಿದವರಾರ್ಗೆ? ಆರ್ಯರೊ? ಅನಾರ್ಯರೊ?

ಏಕಲವ್ಯ

ಇದಿರು

ನುಡಿದೆಂದು ಕನಲದಿರು ತಾತ, ತಾರಾಣತಿಯ

ಹಿರಣ್ಯಧನು

ಕರು ಕೊಣಕೆ ಕಂಬದಾ ಕೆಳಗಂತೆ! ಕೇಳಯ್ಯ
ಜೇನನೀಂಟುವೆ, ಅಕಟ ಹುಳದ ಕೊಂಡಿಯ ಮರೆವೆ!
ಬೇಡವನ ತಳ್ಳಿ! ನಿನಗಾಂ ಕಲಿಸಿದುದೆ ನಿನ್ನ
ಸಾಸಿರವಧಿಗೆ ಸಾಕು. ನೆಟ್ಟಾನೆ ಬಾಳ್ವೆಯಲಿ
ನೆಟ್ಟಾನೆ ನಡಿ, ನೇರ ನೀರಲಿ ಜಿಗುಳೆಯಂತೆ
ಕೊಂಕುವರಿಯದಿರಣ್ಣ! ಎಳೆಯಲೊಲ್ಲದ ಎತ್ತು
ಮಿಣಿಯ ಮೇಲ್ಬೀಳ್ವಂತೆ ಬರಿದೆ ದೂರದಿರೆಮ್ಮ
ಬಿಲ್ಲುಗಾರಿಕೆಯನಿದೊ ತನ್ನ ಕಂಪರಿಯದಾ
ಕತ್ತುರಿಯ ಮಿಗದಂತೆ ನಿನ್ನ ಶಕ್ತಿಯನರಿಯ
ದಿಂತಲೆಯಲಾಟಿಸುವೆ. ಕೇಳೆಮ್ಮ ಪಾಳೆಯದಿ
ನಿನಗೆ ಮಿಗಿಲಾರಿಲ್ಲ. ಬಿದಿರ ಮೆಳೆಯಲಿ ಗಂಡು
ಬಿದಿರಾಗು, ಬಳಿಯ ಗಂಡಾಡಿಯಾಗೆಲೊ ಕಂದ!

ಏಕಲವ್ಯ

ಜಾಡಿಸುವನಾಗೆ ಜಾಡಿಸಿದೊಡೂಣೆಯವೇನು?
ಕವೆಗಿದೆಕ್ಕಟಿ ಕಲ್ಲೆ? ಎಸೆವ ದಾಯವನೆಸೆವ,
ದುಗ ಬೀಳ್ಕೆ, ತಿಗ ಬೀಳ್ಕೆ! ಯತ್ನಿಸದೆ ಕೆಯ್ಯಟ್ಟಿ
ಕುಳಿತಿಹುದೊ, ಯತ್ನಿಸಿಯೆ ಬರಡಾದರದೊ ಲೇಸು?
ಅಪ್ಪಣೆಯ ಕೊಡು ತಂದೆ.

ಹಿರಣ್ಯಧನು

ಬಿದಿರ ಹಿಂಡಿಗೆ ಕಲ್ಲ
ನೆಚ್ಚು ನಗುವೆಗ್ಗರೆಂದೆಮ್ಮ ನಗುವಾರ್ಯರಾ
ನೆರವಹುದೊ ನಾ ನಂಬಿ! ನಿನ್ನ ಕುತ್ತಿಗೆಗವಂ
ಕೊಂಬುವೆರೆಯೊತ್ತದಿರೆ ನನ್ನ ಹೆಸರಂ ಮಗಚು!

ಕಡ್ಡಿ ಮುರಿದಿದೊ ಪೇಳ್ವೆ, ನೀನಲ್ಲಿಗಯ್ದದಿರು!
ಕನದ ಬತ್ತಕೆ ಗೋಣಿಯಾಂಪೆ ನೀ, ಕೇಳವಂ
ತಲೆಗೆ ಕೆಯ್ಯಾಗಿಸದಿರಂ ನಿನ್ನ!

ಏಕಲವ್ಯ

ಅಂತಾತ

ನೆಸಗಲೆನ್ನಯ ಕಲಿಕೆಗದೆ ಗಡಾ ಓನಾಮ!

ಗೊಂದಳ

ಅಬ್ಬಬ್ಬ ನಿನ್ನ ನಿಶ್ಚಯವೆ! ನಿನ್ನಯ ಛಲವೆ!
ನುಡಿದ ಮಾತನೆ ಹಿಡಿವೆ! ಮುತ್ತುಗಕೆ ಮೂರೆ ಎಲೆ!

ಹಿರಣ್ಯಧನು

ನೂತುದೆಲ್ಲಾ ಹಂಬಿಯಾಯ್ತೆ? ಅಕಟಾ ಕಂದ
ನೋತೆ ನಿನ್ನಲಿ! ಸೀಸದುಳಿಯೆ ಬಂಡೆಯ ಸೀಳೆ?

ಗೊಂದಳ

ಬಿಲ್ಲ ಬಾಗಿಸಲಹುದು, ಛಲ್ಲೆ ಬಾಗಿಸಬಹುದೆ?
ಮುರಿವನಲ್ಲದೆ ಮಣಿವನಲ್ಲ, ಬೀಳ್ಕೊಡದೇವೆ?

(ದೂರಕ್ಕೂ ಮೇಲಕ್ಕೂ ನೋಡಿ)

ನೋಡೀಗ ಗೋವುಗಳ ಮೇವಿಗಟ್ಟುವ ಹೊತ್ತು
ಕೊಳಲ ದನಿ ಸೂಸುತಿದೆ, ತುರುಗುಂಪು ಬೀಸುತಿದೆ;
ಹಾಡುತಿವೆ ಹಕ್ಕಿ, ಓಡಾಡುತಿವೆ ರುರುರಾಜಿ;
ನೇಸರಿದೊ ತಣ್ಬಿಸಿಲ ಬೆಳ್ಮಳೆಯ ಕರೆಯುತಿದೆ,
ಅಳಿವಿಂಡ ತೊಟ್ಟಿಲಾಡುತಿದೆ ತಾವರೆವಿಂಡು,
ತಣ್ಣೆಲರು ತೀಡುತಿದೆ, ಪಯಣಕಿದೆ ಸಿರಿಹೊತ್ತು—

ಹಿರಣ್ಯಧನು

(ಏಕಲವ್ಯನ ತಲೆಯಲ್ಲಿ ಕೆಯ್ಯಿಟ್ಟು)

ಪೋ ಕಂದ, ಪರಶಿವಂ ಬೆಂಬಲಿಸುಗೆಮ ನಿನ್ನ!
ಬಗ್ಗದೊವಲಗೆ ಸೊಡರ ಹಚ್ಚಿಸುವೆ, ಹಾಲೆರೆವೆ;

ಎಲ್ಲರಮ್ಮಗೆ ಕೋಣವೀವೆ; ಬನದೇವತೆಗೆ,
ನೀರ ದೇವತೆಗೆ ಕಳ್ಳಿರೆವೆ; ಸತ್ತರಿಗೆ ಕುರಿ
ಕೋಳಿಯಂ ಬಡಿಸಿದಪೆ; ಪಾಳೆಯವನುಣಿಸಿದಪೆ.
ಬಿಲ್ಲಾರರಲಿ ಮುಂಚನೆನಿಸಿ ಸೊಗದಿಂ ಬಾರ!

ಏಕಲವ್ಯ

ಗಜಪುರಕಾಂ ವೋಗುವೆ, ಗುರುವಿಗೆ ಬಾಗುವೆ, ಕಲಿವೆನವರೊಳಾಂ
ಬಿಲುವಿದ್ದೆ! ಲ
ಈ ಬಯಕೆ ಏವರಂ ನೆರೆಯದಾವರಂ ನನಗಕಟಾ ಬಾರದು ನಿದ್ದೆ!
ಕಲಿಸನು ಗುರುವೆಂದೆ ಏತಕೆ ತಂದೆ ಮನದಿ ಬರಿಯ ಶಂಕೆಯ ತಂಟೆ?
ಎನಿತೆನಿತೋ ಮೋರೆಯ ಕನ್ನಡಿ ತೋರೆಯದರಿನಿನಿಸುಂ ಕುಂದುವುದುಂಟೆ?

(ಸಿಳ್ಳು ಹಾಕುತ್ತ)

ಸುಸು ಸೂಸೂ ಸೂಸೂ ಸುಸುಸೂ ಸೂಸೂ ಸುಸುಸೂ ಸೂಸೂ
ಸೂ ಸೂ ಸೂ

(ಹಿದೆ ಏಟುತ್ತ)

ರುರು ರೂಂರೂಂ ರೂಂರೂಂ ರುರುರೂಂ ರೂಂರೂಂ ರುರುರೂಂ
ರೂಂರೂಂ ರೂಂ ರೂಂ ರೂಂ. ೧೦
ಕಣ್ಣನುಚ್ಚಿದ ಗಿಡುಗನಂತೆ ಮನಸಾರೆ ನಾ
ನಿನ್ನು ಹಾರುವೆ. ತಾತ ಪೊಡಮಡುವೆ, ಹೊರವಂಟೆ.

(ಹಿರಣ್ಯಧನುವಿನ ಕಾಲಿಗೆರಗಿ ಏಕಲವ್ಯನು ಹೋಗುವನು)

ಹಿರಣ್ಯಧನು

(ಏಕಲವ್ಯನು ಹೋದ ದಾರಿಯನ್ನೇ ನಿಟ್ಟಿಸಿ)

ಈತನೆನ್ನಣ್ಣನ ಮಗಂ, ಸನಿಹದಾರ್ಯರೊಡ
ನಡರಾಟದಲಿ ಮಡಿಯಲಾತನಾತನ ಪಾಳ್ಯ
ದೊಡೆತನಂ ಬಾಲನೀತನ ಸಾಕಣೆಯುಮೆನಗೆ ೧೫
ಬಂತಂದಿನಿಂ ಮರವ ತಾಯ್ಬೇರು ಪೊರೆವಂತೆ
ಭಿಲ್ಲರಂ ಪೊರೆವೆ, ಮಣಿಯಂ ನಾಗನಂತಿವನ
ಜೋಪಾನಗೆಯ್ವೆ, ನಾಲಗೆ ರುಚಿಯನೆಂತಂತೆ

ಈತನಂ ಬೆಳಸಿದಪೆ. ಅಮಮ ಈತನ ಫಲವೊ
ಉಡುವ ಹಿಡಿತವೊ! ನೋಡ, ಮರಗುದುರೆಯಲಿ ಮರವ
ಮರೆತು ಮಕ್ಕಳು ಕುದುರೆಯಾಡುವೊಲು ಕೆಲಸವ
ಲ್ಲದೆ ನುಡಿಯನರಿಯಂ—

ಗೊಂದಳ
(ಎರಡು ಪಾಲಾಗಿ)
೧ನೆಯ ಅರ್ಧ

ನಿಷಾದರಾಣ್ಮನೆ ಕೇಳ,
ಜಗದಿ ಮೂವಿಧದ ನರರಿಹರು; ಮೊದಲವರೆಕ್ಕ
ದಂತೆ ಹೂವುಂಟು ಹಣ್ಣಿಲ್ಲ, ಗಳಪವೆ ವಿನಾ
ಕೆಲಸವೆನೆ ಹಿಡಿಹತ್ತಿ! ಈಳೆಯಂತೆರಡವರು,
ಹೂವೆ ಹಣ್ಣಹ ತೆರದಿ ಮಾತೊಡನೆ ಮಾಟವಿದೆ!
ಅತ್ತಿಯಂತಿನ್ನವರು, ಹೂವಿಲ್ಲ ಹಣ್ಣೆಸೆ,
ಕೆಲಸವಲ್ಲದೆ ಮಾತನೊಲ್ಲರೀತನೊ ಕೆಲಸ
ಗಾರ! ಕಿರುಮೆಣಸಂತೆ ಬಲು ಕಾರವಿಹನೀತ!
ಮಾತಿನೊಳವಂ ಹಿಡಿವ ಗೆರಸೆಯಲ್ಲದೆ ಬಿಡುವ
ಜರಡೆಯಲ್ಲೀ ಪೋರ!

೨ನೆಯ ಅರ್ಧ

ಮತ್ತಾಲಿಸೈ ನರನ
ಬಾಳ್ವೆಯಲಿ ಬಹುದೊಂದು ಕಾಲವಂದಾತನಂ
ಜುಟ್ಟು ಹಿಡಿದೆತ್ತಿದಂತಾಗೆ ಮೇಲಹನಾತ
ನಾ ಕಾಲವೀ ಬಾಲಗೀಗ ಬಂದಿರದೇಕೆ?
ದೇವರಿವನಂ ಬೆಳಸಬೇಕು! ನೋಡಿಂಥವರೆ
ಬಾಳ ಹೋರಾಟದಲಿ ಗೆದ್ದು ಬರುವರು; ನಾಳೆ
ಇಂಥವರಿಗೆಂದೆ ಕಾದಿರಿಸಿದಾ ಮುಡುಪು ಗಡ!

(ಎರಡೂ ಪಾಲುಗಳು ಒಟ್ಟಾಗಿ)

ಅವನ ಮನದೂಲೆ ತವಿಸುವುದೆ ನಿನ್ನಯ ಧರ್ಮ,
ಮುಂದೆ ಏನಹುದೊ ಮುಂದೆಯೆ ಬಲ್ಲುದಾ ಮರ್ಮ!

(ತೆರಳುವರು)

ನೋಟ ೨

೧ನೆಯ ನೋಟದ ೭—೮ ದಿನಗಳ ಬಳಿಕ. ಹಸ್ತಿನಾವತಿಯಲ್ಲಿ ಅರಮ
ಯಿಂದ ಕೊಂಚ ದೂರದಲ್ಲಿರುವ ಗರುಡಿಯ ಮನೆಯ ಮುಂದಣ ಗಂಗೆಯ
ತಡಿಯ ಬಯಲು. ಗರುಡಿಯಿಂದ ಸಾಧಕರ ಕಲಕಲಾಟ ಆಗಾಗ್ಗೆ ಕೇಳಿಸುತ್ತಿ
ಹೊತ್ತು ಎಳೆ ಹಗಲು. ಒಂದು ಕಡೆಯಿಂದ ದ್ರೋಣಾಚಾರ್ಯರೂ ಮತ್ತೊಂದ
ಕಡೆಯಿಂದ ಗೊಂದಳದವರೂ ಪ್ರವೇಶಿಸುತ್ತಾರೆ.

ದ್ರೋಣಾಚಾರ್ಯ

ಕುರುಕುಲದ ಬಾಲರಿಗೆ ಶಸ್ತ್ರಾಸ್ತ್ರವಿದ್ಯೆಯಂ
ಕಲಿಸಿದಪೆನವರವರ ಮೆಚ್ಚಿನಾಯುಧಗಳಲಿ
ನಿಷ್ಣಾತರಾಗಿಸುವೆ. ತೇರಾನೆ ಕುದುರೆಗಳ
ಸೇರಿ ಕಾದಾಡೆ ಮೇಣ್ಮಲ್ಲ ಯುದ್ಧವ ಮಾಡೆ
ಕಲಿಸಿದಪೆನಾದಡವರೆಲ್ಲರಲಿ ಅರ್ಜುನನೆ
ಮೇಲುಗಳ ಮೇಲು, ಸರ್ವಸ್ವರದೊಳೋಂಕಾರ!
ಉಂಬ ಸೊಡರಾರಲವನುಂಡಪಂ, ಕಾರಿರುಳೊ
ಳೆಸೆದಪಂ! ನೋಡ ಮೊನ್ನೆಯ ಮೊನ್ನೆ ಹೊಂಗೆಯಾ
ನಿಬಡಚ್ಛದಾಂತರಿತ ಶಕುನಿಯನ್ನೆಸಿರೆಂದೆ,
ನಿರ್ಬೀವವಾಗಿ ಕೆಡವಿಸಿರೆಂದೆ. ನಿಟ್ಟಿಸಿದ
ರೆಲ್ಲರಿಬ್ಬರೆ ಕಂಡರೈಸೆ. ಪುಕ್ಕವ ಕಂಡ
ಕರ್ಣನದನಲ್ಲಿಗಿಸೆ ಮಡಿಯದುರುಳುವ್ದೆಂದು
ಬಗೆಗುಂದಿ ಪಿಂಚಲಿದೊ ಕಂಡ ಕಣ್ಣಿಗೆ ಪಾರ್ಥ
ನದರ ಕಂತದ ಮಣಿಯ ಕುರಿತೆಸೆಯೆ, ಕಣ್ಮುಗಿದು
ನೆಲಕೆ ಹೊರಳಿತು ಹಕ್ಕಿ! ಭಳಿರೆ ಫಲುಗುಣ ಭಳಿರೆ!
ಉದ್ಗಾತನಾ ಗಾನದಿಂದೆ ಕರ್ಣಾಕರ್ಣಿ
ಯಾಗಿ ಪಸರಿಪ ಸಾಮವೇದದಂತಿರದೆಸೆವ
ದಿವ್ಯಾಸ್ತ್ರದಿಂದಯ್ದೆ ಕಾರ್ಮುಕಂ ನೆಗಳ್ವಂತೆ,
ಹೋಮಾಗ್ನಿ ಪೂರ್ಣಾಹುತಿಯಿನುಜ್ವಲಿಸುವಂತೆ,
ನಿನ್ನ ಧಾನುಷ್ಕತೆಯಿನಾಂ ಜಗದಿ ಜಸವಡೆವೆ!
ಉದ್ದಂಡ ಬಾಳಣುಗ!

(ತೆರೆಯಲ್ಲಿ)

ಏಕಲವ್ಯ

ನಾನಿಲ್ಲಿಗೆ ನಿನ್ನೆ ಬರುವುದೆ ಮುನ್ನೆ ಗುರುವನು ಕಂಡೆರಗಿದೆನಡಿಗೆ,
ಕಲಿಸೆಂದೆನಗಯ್ದೆ ಅರಿಕೆಯ ಗೆಯ್ದೆ, ಸೇರಿಸಿ ಬಿಲುವಿದ್ಯೆಯ ತಡಿಗೆ!
ಮೊಗದಲಿ ನಗೆಯೂರುತಿರೆ ನೂರಾರು ಕುವರರ ಗಜರಗಳೆಯ ಕೇಳೆ,
ಗುರುವೆಂದರು ಇಂದು ಬೇಡವೊ ಬಂದು ಕಾಣಣುಗಾ ತನ್ನನು ನಾಳೆ!

(ಸಿಳ್ಳು ಹಾಕುತ್ತ)

ಸುಸು ಸೂಸೂ ಸೂ ಸೂ ಸುಸುಸೂ ಸೂಸೂ ಸುಸುಸೂ ಸೂಸೂ
ಸೂ ಸೂ ಸೂ,

(ಹೆದೆ ಮೀಟುತ್ತ)

ರುರು ರೂಂರೂಂ ರೂಂರೂಂ ರುರುರೂಂ ರೂಂರೂಂ ರುರುರೂಂ
ರೂಂರೂಂ ರೂಂ ರೂಂ ರೂಂ.

ಗೊಂದಳ

ಆಚಾರ್ಯ, ಇತ್ತಲ

ಯ್ತಹನೇಕಲವ್ಯನಿಲ್ಲಿಗೆ ಹತ್ತು ಗಾವುದದೊ
ಳಿಹುದೊಂದು ಭಿಲ್ಲರ ಗ್ರಾಮವಲ್ಲಿಯ ಭಿಲ್ಲ
ರಾಣ್ಮನ ಹಿರಣ್ಯಧನುವಿನ ಸಾಕುಮಗನಿವಂ.

ದ್ರೋಣ

ನಿನ್ನೆ ಕಂಡಿಹೆನವನ, ಚಾಪಾಗಮವ ಕಲಿವ
ನಂತೆ! ನಾನದನವಗೆ ಕಲಿಸಬೇಕಂತೆ! ಏ
ನುದ್ಧಟಿ! ನಿಷಾದಗಮಮಾ ಧನುರ್ವೇದವೇ?
ಕ್ಷತ್ರದಾರಕರ ಸಹವಾಸದೊಳೆ ಶಿಕ್ಷಣವೆ?
ರಾಸಭಕ್ಕೀಯಲೆ ಪುರೋಡಾಶ? ಭೂನಾಗ
ಕಮಮ ಮಾನಾಗಗಳ ಸಂಗತಿಯೆ? ಕೇಳ್ದರಿಯೆ!
ಕುರುವೃದ್ಧರೇನೆನ್ನರೆನಗೆ? ಹಾ, ನಾನೊಲ್ಲೆ!

ಗೊಂದಳ

ಕುರುಕುವರರೊಪ್ಪೆ ಜತೆಯಲಿ ಕಲಿಸಲೇನಡ್ಡಿ?

ದ್ರೋಣ

ನೋಳ್ಪೆನಾದೊಡಮೆಂದು ಕೇಳ್ದೆ ಕುವರರನೆಲ್ಲ,
ಏನೆಂಬಿರೈ? ತೆಗೆದ ಬಾಯ್ಗೆ ಧರ್ಮಜ ಕಲಿಸ
ಬೇಕೆಂದ, ಕರ್ಣ ತನ್ನಯ ಮೂಲ ಮರೆತು ಕಿವಿ
ಮುಚ್ಚುತವಿಧೋ ಎಂದ, ಕೌರವಂ ಕಣ್ಣಂಕೆ
ಜಂಕಿಸುತ ಸರ್ವಥಾ ಕಲಿಸಬಾರದೆನುತ್ತ
ಮೊಗದಿರುಹಿ ನಿಂದ, ಮೇಣರ್ಜುನಂ ತಲೆವಾಗಿ
ನೆಲವ ಗೀರುತ ನಿರುತ್ತರನಾದ–

ಏಕಲವ್ಯ

(ಪ್ರವೇಶಿಸಿ)

ಗುರುದೇವ,
ಪೊಡಮಡುವೆ ತಮ್ಮಡಿಗೆ.

(ಬಿಲ್ಲಂಬುಗಳನ್ನು ದ್ರೋಣಾಚಾರ್ಯನ ಕಾಲ ಬಳಿಯಲ್ಲಿ ಮಡಗಿ ಮೈಚಾಚುವನು)

ದ್ರೋಣ

ಮಂಗಲಾನಿ ಭವಂತು!

ಏಕಲವ್ಯ

(ಎದ್ದು ಕೈಯ್ಕಟ್ಟಿ ನಿಂತು)

ಏನಪ್ಪಣೆಯೊ ದೇವ ನನ್ನ ಬೇಡಿಕೆಗೆ?

ದ್ರೋಣ

ಇದೊ
ನೀ ಭಿಲ್ಲಶಾವಕಂ, ನೀನನಾರ್ಯಕಿಶೋರ,
ನಿನಗೆ ಪಂಚಮ ವೇದವಂ ಕಲಿಸಲಾಸ!

ಏಕಲವ್ಯ

(ತಬ್ಬಿಬ್ಬಾಗಿ)

ಆಃ
ಅಂತೆನೆ ಅನಾರ್ಯರು ಮನುಷ್ಯರಲ್ಲವೆ ಜೀಯ?

ದ್ರೋಣ

ಮನುಜರವರೈಸೆ! ಖಗಗಳಲಿ ತಾರ್ಕ್ಷ್ಯ್ಯ-ಧ್ವಾಂಕ್ಷ
ನೆಂತು, ಮೃಗಗಳಲಿ ಶಾರ್ದೂಲ-ಮಾರ್ಜಾಲವೆಂ
ತಂತೆ ಆರ್ಯರನಾರ್ಯರತಿ ಭಿನ್ನರಹರು. ಖಗ
ರಾಜನೇಂ ಕಲಿಸುವನೆ ವಾಯಸಕೆ ಪಕ್ಷವಂ
ಕೊಡಹದೋಲಾಡೆ? ವ್ಯಾಘ್ರಂ ಬಿಡಾಲಕೆ ತನ್ನ
ಲಂಘನವ ಕಲಿಸುವುದೆ? ನಿನ್ನುದ್ದ ಮಿಕ್ಕು ನೀ
ನೆಗೆಯ ಬೇಡವೊ ಕಂದ!

(ಏಕಲವ್ಯನು ಸ್ತಬ್ಧನಾಗುವನು)

ಗೊಂದಳ

ಭಿಲ್ಲಗೆ ಧನುರ್ವಿದ್ಯೆ
ಕಲಿಸಲಾಚಾರ್ಯ ತಪ್ಪೇನಂತೆ?

ದ್ರೋಣ

ಮೊದಲೊಳಾಂ

ಬ್ರಾಹ್ಮಣಂ, ವರ್ಣಧರ್ಮವನಧಃಪಾತಿಸಲೆ?
ಶಾಸ್ತ್ರವಂ ಗಂಗೆಗೆಸೆಯಲೆ? ದ್ವಿಜರ ವಿದ್ಯೆಯಂ
ಭಿಲ್ಲಗೊರೆಯಲೆ? ಮೇಲೆ ಕ್ಷತ್ರೋಪಜೀವಿಯಾಂ,
ವರ್ಣಸಂಕರವಾಗದಂತೆ ಪಾಲಿಪ ರಾಜ
ನೀತಿಗಾಂ ವ್ಯಾಘಾತ ಒಡ್ಡಲೆ? ವೃಥಾ ರಾಜ
ರವಕರುಣೆ ಸಂಪಾದಿಸಲೆ? ಭಿಲ್ಲರಿಗೆ ವಿಪ್ರ
ರಾಚಾರ್ಯತೆಯ ಸಮಾಜವೆ, ಸಂಪ್ರದಾಯವೆ ನಿ
ಷೇಧಿಸುತ್ತಿರಲಾ ಸಮಾಜಾಂಗವಾದ ನಾ
ನುಲ್ಲಂಘಿಸಲೆ? ಸಾಕು, ಸಾಕು, ಮಾ ಮಾ, ಒಲ್ಲೆ.

ಏಕಲವ್ಯ

(ಪ್ರಯತ್ನಪೂರ್ವಕವಾಗಿ)

ಬೆಂಕಿ ತಳಿಯದೆ ಹೊಗೆಯ? ಬೆಟ್ಟ ತಾಳದೆ ಹುಲ್ಲ?
ಗಂಗೆಗೆರೆದಾ ಹೆಂಡ ಗಂಗೆಯಾಗದೆ ದೇವ?

ದ್ರೋಣ

(ವಿಸ್ಮಯದಿಂದ ತನ್ನಲ್ಲೆ)

ಬಲು ತೀಕ್ಷ್ಣಮತಿ ಈತನರಣೆಯಿಂ ಸಿಡಿತರುವ
ವಿಸ್ಫುಲಿಂಗಗಳಂತೆ ಎದ್ದು ಬರುತಿವೆ ಮಾತು!

(ಪ್ರಕಾಶವಾಗಿ)

ನಿನ್ನ ಬಾಲವೈಢಿಗಮವು ಮೆಚ್ಚಿದೆನಗ್ನಿ
ಧೂಮದಿಂದಾರುತಿದೆ, ಪರ್ವತಂ ತೃಣದಿಂದ
ದಾವಕೀಡಾಗುತಿದೆ, ಗಂಗೆಯಿಂದೆಸಗಿದಾ
ಮದಿರೆಯಂ ಪಾನಿಪರೆ? ಭಿಲ್ಲರಿಗೆ ಆರ್ಯರಾ
ಸಂಗತಿಯೆ? ಅಲಮಲಂ! ಕೂಸಾಡಿಸದಿರೆನ್ನ!

ಏಕಲವ್ಯ

ಇನಿತು ಹೆಲ್ಲಣೆಯೊ ಬಡ ಭಿಲ್ಲನೊಳಕಟ ದೇವ!
ಒಂದೆ ಮಾತಿದೆ ಕೇಳಿ, ತಾವೆನಗೆ ಕಲಿಸದಿರಿ,
ತಮ್ಮ ಅಡಿಯೂಳಿಗದೊಳೆಡೆ ಇತ್ತರದೆ ಸಾಕು!

ಗೊಂದಳ

ಅನಿತೊಂದು ವಿತರಣೆಯನೆಸಗಬಾರದೆ ಓಜ?

ದ್ರೋಣ

(ಹುಬ್ಬುಗಂಟಿಕ್ಕಿ)

ಬೇಡ, ಬೇಡೀ ಛಲವ ಮಾಣಯ್ಯ! ನೀನೆನ್ನ
ಕರ್ತರೀಕ್ರಮುಕಸ್ಥಿತಿಯನರಿಯೆ! ಧರ್ಮಸಂ
ಕಟಕೆನ್ನನೀಡುಗೊಳಿಸದಿರಣ್ಣ! ನವ್ಯಾರ್ಯ
ಧರ್ಮನಿಯಮಂ ಕಠೋರಂ ಗಡ! ಕಠೋರತರ
ವೆಮ್ಮಯ ಸಮಾಜನಿಯಮಂ! ನಾನತಿಕ್ರಮಿಸೆ.

ಏಕಲವ್ಯ

(ಜೋಲುಮೋರೆಯಾಗಿ)

ಶಿವ ಶಿವಾ! ಅರುಳುದೋರೆಯ ದೇವ?

ದ್ರೋಣ

ನಾನೇನೆ?

ನನಗರಿದು ಕಂದ, ನೀ ಬೇರೆಲ್ಲಿಗಯ್ದಿ ಕಲಿ.
ಲಂಬಿಸಿತು ಕಾಲ, ಗರುಡಿಯಲಿ ಕುವರರು ನನ್ನ
ದಾರಿ ಕಾದಪರು.

ಏಕಲವ್ಯ

ಅಂತೆನೆ ತೆರಳಲೇಂ ಜೀಯ?
ಹರಸಿ ನಲ್ನುಡಿದೆನ್ನ ಕಳುಹಿಸೈ ಗುರುದೇವ!

ದ್ರೋಣ

(ಕೆಯ್ಯೆತ್ತಿ)

ಕಾಮಿತಾರ್ಥವ ನಿನ್ನ ಪೂರಯಿಸಲೀಶ್ವರಂ!
ಬಿಲಾ್ಜಣನಾಗು, ಜಸವಡೆಯ ಜಗದಲಿ ಕಂದ!
ಚಿರಕಾಲ ಜೀವಿಸು! ಶಿವಾಸ್ತೇ ಪಥಾಃ ಸಂತು!

ಏಕಲವ್ಯ

(ಸಂತೋಷದಿಂದ)

ಇದೆ ನನ್ನ ಬಿಲುವಿದ್ಯೆಗೋನಾಮ! ಪೊಡಮಡುವೆ.

(ಏಕಲವ್ಯನು ದ್ರೋಣಾಚಾರ್ಯನ ಕಾಲಲ್ಲಿ ತಲೆಚಾಚಿ ತನ್ನ ಬಿಲ್ಲಂಬುಗಳನ್ನು ಎತ್ತಿಕೊಳ್ಳುವನು. ದ್ರೋಣನು ಹೋಗುವನು.)

ಗೊಂದಳ

ಇಂತಾಯ್ತೆ ಅಕಟ! ನಿನ್ನಮ್ಮನಾ ನಾಲಗೆಗೆ
ಮಚ್ಚೆ ಇದೆ, ಆತನೊರೆದೊಲೆ ಆಯ್ತು. ಮರದ ಹ
ಣ್ಮಿರದ ಬುಡದಾಗೆ ಬಂತಿದಕೆ ಚಿಂತಿಸದಿರೈ!
ನಿನ್ನೆ ಏನಾಯ್ತು?

ಏಕಲವ್ಯ

ಗರುಡಿಯ ಹೊಕ್ಕು ಗುರುದೇವ
ನಡಿಗೆರಗಿ ನನ್ನ ಮನವಿಯನರುಹೆ, ಕಾಗೆಯಂ
ಕೆಡಹೆ ಕೊತ್ತಳಿಯೆ ಒಂದಾಗಿ ಕಾಕಾ ಎಂದು

ಹಾರಾಡುವಂತೆ ನಾಲಯ್ವರಲ್ಲದೆ ನೂರೊ
ಕುವರರೊಮ್ಮಿಗೆ ಕೆರಳಿ ಕೊರಚಾಡಲಿದೊ ಬಾಯಿ
ಬಿಗಿದ ಕುಕ್ಕುರನಂತೆ, ಕೊಡಹಿ ಬಿಸುಟಾ ನಾಗ
ನಂದದಿ ಚಕಾರಿಸದೆ ಗಂಡಿಕೆಯನುಳಿದವರ
ಸೊಕ್ಕು ಸೆಣಸನ್ನುಸಿಕನಾಲಿಸಿದೆ. ಗುರುವಿನಾ ೧೦೫
ನಗೆಯೊಳೊಪ್ಪಿಗೆ ಮಿನುಗುವಂತಿತ್ತು, ಕವಿತಂದ
ಮುನಿಸದಂ ತೊಡೆಯಿತಕಟಾ!

ಗೊಂದಳ

ಮರುಗದಿರು ಕಂದ,
ನರನ ನೆರವಿರದೊಡನೆ ನರಗೆ ದೇವರ ನೆರವು!
ಮನಸೆ ಮುಖ್ಯಂ, ಗುರು ನಿಮಿತ್ತಮಾತ್ರಂ! ಕಲಿಯ
ಮನಸುಂಟೆ? ಸಾಕು, ಕಲಿಸುವುದು ಮಣ್ಣಿನ ಗೊಂಬೆ! ೧೧೦

ಏಕಲವ್ಯ

(ಜಗ್ಗನೆದ್ದು ನಗುತ್ತ ಕುಣಿದಾಡುತ್ತ)

ನಲ್ನುಡಿದೆ! ನೇರ್ನುಡಿದೆ! ಅಂತಕ್ಕೆ! ಅಂತಕ್ಕೆ!
ಗುರುದೇವನ ಮೂರ್ತಿಯ ಮಣ್ಣಿನೊಳರ್ತಿಯಲೆಸಗುತದರ ಮುಂದಕೆ ನಿಂದು,
ಗುರಿಗೆಸೆವೆನು ದೊಣೆಯಂ ತೀವಿದ ಕಣೆಯಂ ತೆಗೆತೆಗೆದೊಂದರ
ಮೇಲೊಂದು!
ನರಗೆಂದಿಗೆ ನರನು ನೆರವಿಗೆ ಬರನು, ದೇವರ ನೆರವಾತನಿಗಹುದು!
ಗುರುವೊಲ್ಲಡೆ ಮನದಲಿ ಗುರುವನೆ ನೆನದಲಿ ಮನಸೇ ಗುರು ತಾನಾಗುವುದು!
೧೧೫

(ಸಿಳ್ಳು ಹಾಕುತ್ತ)

ಸುಸು ಸೂಸೂ ಸೂಸೂ ಸುಸುಸೂ ಸೂಸೂ ಸುಸುಸೂ ಸೂಸೂ
ಸೂ ಸೂ ಸೂ,

(ಪೆದೆ ಮಾಟುತ್ತ)

ರುರು ರೂಂರೂಂ ರೂಂರೂಂ ರುರುರೂಂ ರೂಂರೂಂ ರುರುರೂಂ ರೂಂರೂಂ
ರೂಂ ರೂಂ ರೂಂ.

(ಹೋಗುವನು)

ಗೊಂದಳ

ಕಲಿಯ ಮನಸಿರೆ ಕಲಿಸೆ ಸಾಕು ಮಣ್ಣಿನ ಗೊಂಬೆ
ಎಂದನವಧಾನದಿಂದಾಡಿದೆಮ್ಮಯ ಮಾತು
ಜಗ್ಗನಿದೊ ನಾಟಿತಾತನ ಮನದೊಳಿನ್ನವಂ
ಬಿಲ್ಲೋಜನಾ ಮಣ್ಣ ಗೊಂಬೆಯಂ ಮೆತ್ತದಿರ
ನದರ ಮುನ್ನಿಂದು ಬಿಲುವಿದ್ಯೆಯನ್ನಭ್ಯಾಸ
ಮಾಡದಿರನಿಳೆಯೊಳಗೆ ಹಿರಿಯ ಬಿಲ್ಗಾರ ತಾ
ನಾಗದಿರನೀ ಬಾಲ! ಮಾತು ಕಿರಿದಾದೊಡಂ
ಮೊಟವಪ್ಪುದು ಹಿರಿದು! ಕಣ್ಣು ಕಿರಿದಾದೊಡಂ
ಕಾಣಿಕೆಯ ಹೊಲ ಹಿರಿದು! ಕತ್ತಿ ಕಿರಿದಾದೊಡಂ
ಕಡಿವ ಸಾಹಸ ಹಿರಿದು! ಎಲ್ಲಿನೆಲ್ಲಿಗೆ ಹೋಯ್ತು!
ನಮ್ಮ ಕೆಡೆನುಡಿ ಎಲ್ಲಿ! ಅವನ ಕಡು ಛಲವೆಲ್ಲಿ!
ಮುಂದೆ ಏನೆಲ್ಲ ಹುದೊ ದೇವ ನೀನೇ ಬಲ್ಲಿ!

(ತಿರಳುವರು)

ನೋಟ ೩

೨ನೆಯ ನೋಟದ ಸುಮಾರು ೧—೨ ವರ್ಷಗಳ ಬಳಿಕ ೧ನೆಯ ನೋಟದಲ್ಲಿ ಹೇಳಿದ ಭಿಲ್ಲರ ಹಳ್ಳಿಯಲ್ಲಿ ಆ ಊರಿಗೆಯ ಮನೆಯ ಮುಂದಣ ಒಂದು ಕಟ್ಟೆಯಲ್ಲಿ ಹಿರಣ್ಯಧನುವೂ ಅದರ ಎದುರಿನ ಮತ್ತೊಂದು ಕಟ್ಟೆಯಲ್ಲಿ ಗೊಂದಳದವರೂ ಕುಳಿತುಕೊಂಡಿರುತ್ತಾರೆ. ಹೊತ್ತು ಹಗಲಿನ ೨ನೆಯ ಪ್ರಹರ.

ಹಿರಣ್ಯಧನು

(ಎದ್ದು ಮುಂದೆ ಬಂದು)

ಏಂ ಮರುಳೊ ನಮ್ಮೇಕಲವ್ಯನಿಗೆ! ನಮ್ಮೂರ
ಬಳಿಯ ಬಯಲಲಿ ದ್ರೋಣನಾ ಮಣ್ಣ ಗೊಂಬೆಯ
ನ್ನಿರಿಸಿ ಮುಂದಕೆ ನಿಂದು ಸರಳ್ಗಳನ್ನೆಸೆದೆಸೆದು
ಬಿಲುವಿದ್ಯೆಯಂ ಕಲಿವನಂತೆ! ಹರೆಯಂ ದಂಡ
ವೆಂದೆ, ಬಿಲ್ಬಿನ್ನಣದ ಬಳವಿಗಕಟಿದೆ ಮೂಲ
ವೆಂದೆನಾದಡೆ ಕೇಳ! 'ಇಂತೆ ಸರಳಂ ಬಿಡಲೆ?'
ಎಂದು ತನ್ನನೆ ಕೇಳಿ, 'ಅಂತೆ ತಾನೆಸೆಯ, ಸರಿ!'

ಎಂದು ತನ್ನೊಳೆ ಹೇಳಿ, ಎಸುಗೆಯನ್ನಭ್ಯಾಸ
ವೆಸಗುತಿಹನಿವನಮಮ! ಬಿಸಿಲುಕುದುರೆಯ ನೀರ
ತೋಡುವಾ, ಕಲ್ಲ ನಂದಿಗೆ ಹುಲ್ಲನೂಡುವಾ,
ತನ್ನ ನೆರಳೊಡನೆ ಮಾತಾಡುವಾ ಹುಚ್ಚೆಲ್ಲಿ
ನಿವನಿಗಯ್ದಿತೊ! ಶಿವಶಿವಾ, ಎಂತು ಮಾಣಿಸುವೆ?

ಗೊಂದಳ

(ಎದ್ದು ಮುಂದೆ ಬಂದು)

ಖೇದಿಸದಿರೈ ಭಿಲ್ಲರಾಣ್ಮ, ಸೈರಿಸು! ಕೇಳ
ಮರುಳಿನಿಸು ಮಿಡುಕದಿರೆ ಮನುಜ ಮೇಲಯ್ದುವನೆ?
ನಿನ್ನ ಮಗನಾಚಾರ್ಯನನ್ನೆ ಮಿಕ್ಕಿಹನೀಗ!
ದ್ರೋಣನ ಸಮಕ್ಷದಭ್ಯಾಸದಿಂ ಮೃಣ್ಮೂರ್ತಿ
ಯಿಂದ ಮಿಗೆ ಕಲಿತಿಹಂ! ಸಂಧಾನವಾದಾನ
ಮೇಣ್ ವಿಮೋಕ್ಷ ಕ್ರಮದಿ ನುರಿತಿಹಂ! ಬಿಲುವಿದ್ಯೆ
ಯೊಳವೆಲ್ಲವರಿತಿಹಂ! ನೀರ ಬುಡದಾಮೆಯಂ
ಕಣೆಗೆ ಕಣೆ ಜುಚ್ಚಿ ಮೇಲೆತ್ತುವಂ! ಬರಿಯ ದನಿ
ಕೇಳುತ ಕುರಂಗವಂ ಕಾಣದಲೆ ಕೆಡಹುವಂ!
ನಾಯ ಬಾಯೊಳಗೆ ಕವಡಂಬುವಂ ತುಂಬುವಂ!
ಕೆಯ್ಯೆರಡರಿಂದೆಸೆದು ಸವ್ಯಸಾಚಿಪನವಂ!
ಗುಟ್ಟಾಗಿ ಗೆಯ್ವನಿದೊ ಹೊಂಚಿ ಕಂಡಿವಿದೆಲ್ಲ.

ಹಿರಣ್ಯಧನು

(ನಗುತ್ತ)

ಏಕಿದೆಲ್ಲಾ ಕಾಟ? ಏಕೆ ಬಗೆಬಗೆಯಾಟ?
ಸಾಲದೇ ನಾವುಂಬ ಖಗಗಳಂ ಮಿಗಗಳಂ
ಮಿಾಂಗಳಂ ಕಟ್ಟಿಸೆಯೆ ಗುರಿಗೊಂಬುದಂ ಕಲಿಯೆ?
ನಮ್ಮ ಕೋಳಿಯನೆಮ್ಮ ಪಾರಿವಂಗಳನೊಯ್ವ
ಹದ್ದು-ಡೇಗೆಯ ಕೆಡಹೆ, ನಮ್ಮ ಕುರಿಯಾಕಳ
ನ್ನೊಯ್ವ ಹುಲಿ-ತೋಳ-ಮೊಸಳೆಯ ಮಡುಹೆ ಕುರಿತೆಸೆಯ

ಕಲಿಯೆ ಸಾಲದೆ? ಡೊಂಬರಾಟಕ್ಕೇಂ ಪೋದಪೆವೆ?
ಸುತ್ತಮುತ್ತಲು ತುಂಬ ನೆಮ್ಮದಿಯೆ! ನೆರೆಕರೆಯ
ಶಬರರೊಡನೆಮಗೆ ಜಗಳಗಳಿಲ್ಲ, ನಾಡಿನಲಿ
ಕಾಳೆಗದ ಸುಳುವಿಲ್ಲ ದಿರಲೇತಕೆನ್ನು ಪರಿ
ಪರಿಯ ಕಡುಸಾಸದೀ ಹವಣಿಕೆಯೊ ನಾನರಿಯೆ! ೫೫
ಪರಶಿವನೆ ಬಲ್ಲ, ಮೇಣೇಕಲವ್ಯನೆ ಬಲ್ಲ!

ಗೊಂದಳ

ಅಂತಲ್ಲ ಭಿಲ್ಲವರ, ನಿನ್ನ ಕಾಲಂ ಬೇರೆ,
ಅವನ ಕಾಲಂ ಬೇರೆ! ಸುತ್ತಮುತ್ತಲಿನಾರ್ಯ
ರೆನಿತೊ ಸೋಜಿಗದ ಬಿಲ್ಗಾರಿಕೆಯ ಕೆಯ್ತಗಳ
ಕಂಡಗೆ ಪಿಪೀಲಿಕಾನ್ಯಾಯದಿಂ ತಾನುಮಂ ೪೦
ತೆಸಗಬೇಕೆಂಬುವ ಸ್ಫೂರ್ತಿಯಾದರೆ ತಪ್ಪೊ
ಅಚ್ಚರಿಯೊ ಏನಂತೆ? ಹೋದ ದಾರಿಯೆ ಹೋಕೆ!
ಬಕಬಂಧನಕೆ ವೃಥಾ ಯತ್ನಿಸದಿರೈ ಗೆಳೆಯ!

(ತೆರೆಯಲ್ಲಿ)

ಏಕಲವ್ಯ

ಕಲಿತೆನು ನಾ ಬಿಲ್ಲ ವಿದ್ಯೆಯನೆಲ್ಲ, ಇನ್ನೆಸಗರಿದಿಲ್ಲೆಮ ನೋಡೆ!
ಗುರುವಿನ ಕಣ್ಮುಂದೆ ಕಲಿವ್ರದರಿಂದೆ ಅವರ ನೆನವೆ ಕಲಿಸಿತು ನಾಡೆ! ೪೫

ಗೊಂದಳ

ಇದೊ ಮಾತು ಕೇಳುತಿದೆ, ಬಂದನಿತ್ತಲೆ ನೋಡ.

ಏಕಲವ್ಯ

(ಪ್ರವೇಶಿಸಿ)

ಇನ್ನಲ್ಲಿಗೆ ಹೋಗಿ ಕಾಲಿಗೆ ಬಾಗಿ, ತೆತ್ತು ಗುರುಗೆ ಕೆಯ್ಗಾಣಿಕೆಯಾ,
ಮರಳುತಲಾಂ ಜಗದಿ ಮೆರಸುವೆ ಸೊಗದಿ ಬಗೆಬಗೆಯಾ ಬಿಲ್ವಾಣಿಕೆಯಾ!

(ಸಿಳ್ಳು ಹಾಕುತ್ತ)

ಸುಸು ಸೂಸೂ ಸೂಸೂ ಸುಸುಸೂ ಸೂಸೂ ಸುಸುಸೂ ಸೂಸೂ
ಸೂ ಸೂ ಸೂ,

(ಪದೆ ಮಾಟುತ್ತ)

ರುರು ರೂಂರೂಂ ರೂಂರೂಂ ರುರುರೂಂ ರೂಂರೂಂ ರುರುರೂಂ ರೂಂರೂಂ
ರೂಂ ರೂಂ ರೂಂ.

ಹಿರಣ್ಯಧನು

ಸಾಲದೇಂ ಕಂದ ಹಾವಿನ ಬಿಲದ ಬಳಿಗಯ್ದಿ
ಸೋರೆಯನ್ನೂದಿದುದೆ? ಇನ್ನದರೊಳಗೆ ಕೋಲ
ಕುಕ್ಕಿ ಕೆಣಕಿಸಬೇಕೆ? ಕೆಯ್ಯಾಗಿಕೆಯನೀವೆ!
ಕೆಯ್ಯೆ ಕಾಣಿಕೆ ಕೇಳಲೇವೆ?

ಏಕಲವ್ಯ

ಕಟಕನೆ ಕೊಡುವೆ.

ಬಿಲ್ಲಾವನದೊ ತಾತ ಕೆಯ್ಯಾತನದೆ! ಆತ
ಬಿಲ್ಗಣೆಯ ಕೇಳಲೊಪ್ಪಿಸುವೆನೆನೆ, ಕೆಯ್ಯಿದ್ದು
ಲೇಸೇನು? ಹಲ್ಲುದುರೆ ಜಾಯಿಲನ ಗುಣವೇನು?
ಕೇಳಾತನಲಿ ತಂದೆ, ಬಿಲುವಿದ್ಯೆ ಕಲಿತಂದೆ
ಇತ್ತೆನವನಿಗೆ ಕೆಯ್ಯನೊತ್ತೆ, ಇನ್ನಿದು ನನ್ನ
ದಲ್ಲ; ಮರಳೀಯಲಿದ ಬಿಡಿಸಿ ತಹೆ, ಇಲ್ಲದೊಡೆ
ಬಿಟ್ಟು ಬಹೆ.

ಹಿರಣ್ಯಧನು

(ವಿಸ್ಮಿತನಾಗಿ)

ಏಂ ಮರುಳೊ! ಏಂ ಮರುಳೊ! ಎನಿತು ಮಳೆ
ಗರೆದೊಡೇಂ ಹಬ್ಬೆ ಹೂವುದೆ ದೇವ?

ಗೊಂದಳ

ಅಂತೆ ನೀ
ನೆಸಗಲಿನಿತಾಸರಿಸಿ ಬೇಸರಿಸಿ ಬಿಲುವಿದ್ಯೆ
ಕಲಿತಕಟ ಫಲವೇನು? ಹಡಗಿಗಹ ಹೆಮ್ಮರವ
ಕೀಲಿಗೇಂ ಕಡಿದಪರೆ?

ಏಕಲವ್ಯ

ಕಲಿತೆನೆಂಬುವ ತಣಿವೆ,
ಸಾಲ ತಿದ್ದಿದೆನೆಂಬ ತಿಳಿಮನವೆ ಫಲವೈಸೆ!

ಬಲಗೆಯ್ಯೆ ಹೋಗಲೆಡಗೆಯ್ಯಿಲ್ಲ? ಸಾಲದೇಂ
ಕತ್ತಿಯಿಂ ಕಡಿಯೆ, ಗದೆಯಿಂ ಬಡಿಯೆ? ಅಂತಾಗೆ
ಕಾಲಿಂದ ಬಿಲ್ತಳೆದು, ಹಲ್ಲಿಂದ ಗೊಲೆ ಸೆಳೆದು,
ಎಡಗೆಯ್ಯ ಕಣೆಯೂಡಿ ಬೇಟೆಯಂ ಕೆಡವಿಸೆನೆ?
ತಾತ ನೀಡಾಣತಿಯ, ಹೋಗಿ ಬಹೆ.

ಗೊಂದಳ

ಸಂಕಲ್ಪ

ವೆತ್ತೆಲತ್ತಲೆ ವಯಿನ! ತಡೆದರೇಂ ತಡೆದಪನೆ?

ಹಿರಣ್ಯಧನು

ಹಿಂದೊಮ್ಮೆ ನೀನಲ್ಲಿ ಹೋಗೆ, ನಿನ್ನಯ ಬಯಕೆ
ನೆರೆಯದೆಂದರಿತೊಡಂ ನಿನ್ನ ಜೀವಕೆ ಮೋಸ
ಎರದೆಂದೆ ಬೀಳ್ಕೊಟ್ಟೆ ನಿನ್ನನೀ ಹೊಸ ಮುಖಾ
ಮುಖಿಯೊ ಜೀವಕ್ಕೆ ಮುಳುವೆಂದೆ ಮನಸಿನ ಕವಲು!
ಕೆಯ್ಗೆ ಬರುವುದೊ? ಕಂಗೆ ಬಹುದೊ? ಜೀವಕೆ ಬಹುದೊ?
ಬಗೆಯಲೆದೆ ಬೆದರುತಿದೆ, ಎಡದ ಕಣ್ಣದುರುತಿದೆ,
ಎಡ ತೋಳು ಹಾರುತಿದೆ, ಸಗುಣನಿದೊ ಚೀರುತಿದೆ!
ತರಿಯ ತಾರದ ತೊರೆಯನೀಸಿ ಆತರ* ತೆರುವೆ!
ತನ್ನ ಗದ್ದೆಯ ಗೇದು ಪೆರರ್ಗೆ ಗೇಣಿಯನೀವೆ!
ಹೋಗ ಬೇಡವೊ ಕಂದ, ಮನಸು ಕಟ್ಟಳುಕುತಿದೆ!

ಏಕಲವ್ಯ

ಕೊಂಡ ಸಾಲವ ಕೊಡದ ನೂರ್ಕೆಡುಕನೆನಿಸಲೇ
ನೆಮ್ಮ ಬಳಿಯನೆ ಸಾಲದೊಳಗದ್ದಿಸಲೆ ತಾತ?

ಹಿರಣ್ಯಧನು

(ಆಲೋಚಿಸಿ)

ಕಂದ ನೀನುದ್ದುದ್ದ ನುಡಿಯೆ ಮಾರ್ನುಡಿಯರಿಯೆ.

* ಆತರ = ದೋಣಿಯ ಕೂಲಿ.

(ಮತ್ತೂ ಅಲೋಚಿಸಿ ಕೊನೆಗೆ ನಿಡುಸುಯ್ದು ಕೆಯ್ಯನ್ನು ಅವನ ತಲೆಯ ಮೇಲಿಟ್ಟು)

ಹೋಗಿ ಬಾ, ಹೋಗಿ ಬಾ, ತಲೆಯಿನಂಗಾಲ್ವರಂ
ಹೊದೆದು ಸೊಗಮಿರಿಸಿ ಪೊರೆಯಲಿ ನಿನ್ನನೀಶ್ವರಂ!
ನಿನ್ನ ತಲೆಹೂ ಬಾಡದಂದದಿಂ ಕೆಯ್ಗಾಯ್ದು
ಮನೆಗೆ ಮರಳಿಸಿಕೊಳಲಿ! ಇದೊ ನಟ್ಟು ಮುರಕೊಳುವೆ.

(ಹಿರಣ್ಯಧನು ಕಣ್ಣೀರನ್ನು ತಡಕೊಂಡು ನೆಲದಲ್ಲಿ ನಟಕೆ ಮುರಕೊಳ್ಳುವನು. ಏಕಲವ್ಯನು ಅತನ ಕಾಲಲ್ಲಿ ತಲೆ ಚಾಚುವನು.)

ಗೊಂದಳ

ಕೇಳುತಿದೆ ಕುರುಕುಲದ ಕುವರರನ್ನೊಡಗೂಡಿ
ಮೃಗಯಾನಿಮಿತ್ತ ದ್ರೋಣಾಚಾರ್ಯನಿತ್ತಲ
ಯ್ತಹನಂತೆ.

ಏಕಲವ್ಯ

ಭಲಭಲರೆ, ಜೆನ್ನಾಯ್ತು! ಜೆನ್ನಾಯ್ತು!
ಗುರು ಬಂದಪನಿತ್ತ ಎಂದರಿಯುತ್ತ ಇಮ್ಮಡಿ ಮುಮ್ಮಡಿಸಿತು ನಲವು—
ಹುಡುಕುವ ಕೊಪ್ಪರಿಗೆ ಕಣ್ಣಿನ ನೆರೆಗೆ ಖಣಿಲನೆದ್ದೊಲಾದುದು ಗೆಲವು!
ನಾಸಿಲ್ಲಿಯೆ ಗುರುವ ಕಾವೆನು ಬರವನವರನು ಮನೆಗೆ ಬರಿಸಿಕೊಂಬೆ,
ತೋರ್ಪೆನೆನಗೆ ಬಿಲ್ಲ ವಿದ್ಯೆಯನೆಲ್ಲ ಕಲಿಸಿದವರ ಮಣ್ಣಿನ ಗೊಂಬೆ!

(ಸಿಳ್ಳುಹಾಕುತ್ತ)

ಸುಸು ಸೂಸೂ ಸೂಸೂ ಸುಸುಸೂ ಸೂಸೂ ಸುಸುಸೂ ಸೂಸೂ
ಸೂ ಸೂ ಸೂ,

(ಹೆದೆ ಏಟುತ್ತ)

ರುರು ರೂಂರೂಂ ರೂಂರೂಂ ರುರುರೂಂ ರೂಂರೂಂ
ರುರುರೂಂ ರೂಂರೂಂ ರೂಂ ರೂಂ ರೂಂ.

(ಹೋಗುವನು)

ಹಿರಣ್ಯಧನು

(ಕಣ್ಣೀರನ್ನು ಒರಸಿಕೊಂಡು)

ಕೆಲದಿನದಿ ಕಾಡುಕೋಣದ ಕೊಂಕುಕೋಡಂತೆ
*ಧೂಮಕೇತು ಕವಲ್ತು ಬಾನೊಳಗೆ ಬೆಳರುತಿದೆ!
ಕೇಡ ಮುಂಗುರುಹು! ಕಂಡಂದಿನಿಂದೆದೆಯಕಟ
ಚಳಿಯುತಿದೆ! ಕಿವಿವೊಕ್ಕ ಕೀಡಿಯಂದದಿ ಕೆಡುಕೆ
ಮನದಿ ಗುದುಗುದಿಸುತಿದೆ! ಕೆಟ್ಟ ಕನ ಕಂಡವಂ
ನಿಟ್ಟಿಸುವೊಲಟ್ಟವಂ ನಿದ್ದೆನೆಮ್ಮದಿಯರಿಯೆ!
ಹಸುಳೆಯಂ ಹರಸೆಂದು ಹರಕೆಯಂ ಹೊತ್ತಿರುವೆ.

ಗೊಂದಳ

ಶಂಕಿಸದಿರೈ ಭಿಲ್ಲವರ ವೃಥಾಪತ್ತಿಯ
ನ್ನೀ ಧೂಮಕೇತು ರಾಜರಿಗೆ ರಾಜ್ಯಕರಿಷ್ಟ
ಹೊರತು ನಿಮಗೆಮಗಲ್ಲ. ದೇವಧುನಿಯುಬ್ಬರಂ
ಸೆಳದೊಯ್ಯೆ ಕಾಡುನಾಡಂ ಬಂಡೆಗಳ ಬಿಡದೆ?
ಕೆಟ್ಟಿಣಿಸದಿನ್ನು ಮನವಂ ತಿಳಿಸಿಕೊಳ್ಳಯ್ಯ!

ಹಿರಣ್ಯಧನು

ಎಂತಾದಡವನರಿಯದಂತವನ ಬಳಿಸಂದು
ವೋಪೆನವರೆದುರುಗಾಣಿಕೆಯ ಕಣ್ಣೊಳೆ ಕಾಂಬೆ,
ಅವರ ಮಾತಾಟವಂ ಕಿವಿಯಳತೆಯೊಳೆ ಕೇಳ್ವೆ.
ಹಲ್ಲಲುಗುವೆಡೆಯಲ್ಲೆ ಸುಳಿವ ನಾಲಗೆಯಂತೆ
ಅವನ ನೆಳಲೊಳೆ ಸುಳಿವೆ, ನೆಳಲೊಡಲನಂತವನ
ನಿಂದಣಮೆ ಸರ್ವಥಾ ಒಂಟಿ ಬಿಟ್ಟಿರ ಸಲ್ಲ!

(ಹೋಗುವನು)

ಗೊಂದಳ

ಕೆಟ್ಟಿಣಿಸದಿರು, ಮನವ ತಿಳಿಸಿಕೊಳ್ಳೆನ್ನುತ ನಿ
ಷಾದರಾಣ್ಯನ ಸಂತವಿಟ್ಟೊಡಂ, ದ್ರೋಣೈಕ

*ಗೊಳಲನೆಯ ಇಸವಿಯಲ್ಲಿ ಕಾಡುಕೋಣದ ಕೊಡುಗಳಂತೆ ಕೊಂಕಾದ ೨ ಕೊಂಬುಗಳಿದ್ದ ಧೂಮಕೇತು ಕಾಣಬಂದಿತ್ತು.

ಲವ್ಯರ ಸಮಾಗಮಂ ನೇರ್ವರಿಯದೊಂದಲ್ಲ
ಒಂದಪಾಯಂ ವೀರಬಾಲನಿಗೆ ತಟ್ಟದಿರ
ದೆಂದಕಟ ಆತನಂತೆಯೆ ನನ್ನ ನಿಶ್ಚಯಂ!
ಪರರ ಕಷ್ಟದಿ ಧೈರ್ಯ ಒರೆವುದೆಮ್ಮಯ ಕಾರ್ಯ,
ಹುಣ್ಣು ಬೇನೆಗೆ ಲೇಪ ಹಚ್ಚಿಸಲೊ? ಉಪ್ಪಿಡಲೊ?
ಎಂದೆ ನಾನಂತೊರೆದೆ. ಕಿವುಡು ಕೇಳ್ದವನೊಡನೆ
ಮಗನ ಹಿಂದೆಯೆ ನಡೆದ.

(ಎರಡು ಪಾಲಾಗಿ)

೧ನೆಯ ಅರ್ಧ

(ಮೇಲಕ್ಕೆ ನೋಡಿ)

ಭಾಸ್ಕರಂ ನೊಗವರಿದ
ನಾದೊಡಂ ಬಾಂದಳದ ಬಿಸುಮುಗಿಲ ಮುಸುಕಿನ್ನು
ತೆಗೆದಿಲ್ಲ; ಸೆಗಳಿಕೆಗಳೇರುತಿವೆ, ಹೊರಗೊಳಗೆ
ಬೇಯುತಿದೆ; ಮೃಗಕುಲಂ ನೀರ್ದಾಣಗಳನರಸಿ
ಸರಿದಪವು, ಖಗಕುಲಂ ಕದಲದೆಲೆಗಳ ಮರೆಗೆ
ಕಣ್ಮುಚ್ಚಿ ಕುಳಿತಿಹವು; ಪ್ರೋಷಿತ ಪ್ರಿಯೆಯಂತೆ
ಮಹಿಯೊ ಮಿಟ್ಟನೆ ಮೌನ!

(ತೆರೆಯಲ್ಲಿ ಕಲಕಲಾಟ).

೨ನೆಯ ಅರ್ಧ

(ಕವಿಗೊಟ್ಟು ಕೇಳಿ)

ಏನಿದೇನಿದು ಕೊಂಚ
ದೂರ ಬರಸಿಡಿಲಂತೆ ಕೇಳುತಿದೆ? ಗುಂಪು ನಾ
ಯ್ಗಳ ಬೊಗಳೊ? ಹಗಲೆ-ತೋಳಗಳೂಳೊ? ಅಲ್ಲವಾ
ಕುವರರೊಡನಾಚಾರ್ಯನೇಂ ಬಂದು ಮುಟ್ಟಿದನೆ?
ಮೃಗವೆಲ್ಲ ನೀರ ಬಳಿ, ಖಗವೆಲ್ಲ ವೆಲೆಯ ಮರೆ
ತಂಗಿಹುದರಿಂದವಂ ಬೇಟೆಯನ್ಹಾಡಲೀ
ಹೊತ್ತೆ ಸುಕರಂ ಗೆತ್ತು ಸಾಧಿಸಿದನೇನಂತೆ?
ಕೌಂಬೆವಲ್ಲಿಗೆ ಹೋಗಿ.

(ಎರಡೂ ಪಾಲುಗಳು ಒಟ್ಟಾಗಿ, ವ್ಯಗ್ರವಾಗಿ)

ಇಂದಕಟ ದುರ್ದಿನಂ!
ದೇವರೇ ಬಾಲಕನ ತಲೆ ಕಾಯಬೇಕು,
ತಲೆಗೆ ಬಹುದುಗುರಿನೊಳೆ ಕಳೆವೋಗೆ ಸಾಕು! ೧೪೦

(ತೆರಳುವರು)

ನೋಟ ೪

ಪಿನೆಯ ನೋಟದ ಮಾರನೆಯ ದಿನ. ಭಿಲ್ಲರ ಗ್ರಾಮದ ನೆರೆಯ ಬಯಲಲ್ಲಿಯ ಅರಳಿಯ ಕಟ್ಟೆಯ ಬಳಿಯಲ್ಲಿ. ಒಂದು ಕಡೆಯಿಂದ ದ್ರೋಣಾಚಾರ್ಯರೂ ಮತ್ತೊಂದು ಕಡೆಯಿಂದ ಗೊಂದಳದವರೂ ಪ್ರವೇಶಿಸುವರು. ಹೊತ್ತು ಹಗಲಿನ ೨ನೆಯ ಜಾವ.

ದ್ರೋಣಾಚಾರ್ಯ

(ಚಿಂತಾಕ್ರಾಂತನಾಗಿ)

ಅಕಟ ಭಾಸಿಪುದು ಭಾರತಭೂ ಭವಿಷ್ಯವತಿ
ಘೋರಾಂಧಕಾರಮಯವಾಗಿ! ಧಾರಾಸಾರ
ಸುರಿವ ಮುನ್ನಾಕಾಶದಂತೆ ಮೇಘಾಚ್ಛನ್ನ
ವಾಗುತಿದೆ! ವಿದ್ವೇಷವಿಷ್ವಕ್ಕೆ, ಜಾತ್ಯಭಿಮಾನ
ಮುತ್ತಮಾಧಮರೆಂಬ ಭೇದ ಕೆಯ್ಮಾರುತಿವೆ! ೫
ದ್ವಿಜರು ತಮ್ಮಯ ವಿದ್ಯೆಯಂ ದ್ವಿಜೇತರರಿಗ
ಧ್ಯಾಪಿಸರು! ಮೇಣವರೊಡನೆ ಹೊಕ್ಕುಬಳಕೆಯಿಂ
ವರ್ತಿಸರು! ದಿಟವೆ ಮುನ್ನೊಮ್ಮೆ ಇತ್ತಾ ಕಾಲ,
ಆರ್ಯರನ್ಯರನಾರ್ಯರನ್ಯರೆಂಬಾಚಾರ
ಕರ್ಥವಂದಿತ್ತಾದಡಿಂದನಾರ್ಯರು ನಮ್ಮ ೧೦
ನಂಗ ಪ್ರತ್ಯಂಗದಿ ವಿಡಂಬಿಸುತ್ತಿರೆ, ನಮ್ಮ
ಧರ್ಮವನ್ನವರು ಬಿಡದಾಚರಿಸುತಿರಲಿನ್ನು
ಮಾ ವಿಧಿಯೊಳಾಗ್ರಹವೆ? ಕೋಗಿಲೆಯ ಕುಹು ಕೇಳಿ
ಕಾಗೆ ಇನ್ನೆನಲೆ? ಸರ್ವಂ ಖಲ್ವಿದಂ ಬ್ರಹ್ಮ
ಎಂಬ ಹನಸೆನ್ಮುವನೆ ಕುರಿತೊ? ಜಗವಂ ಕುರಿತೊ? ೧೫
ಅಂತೆನಲನಾರ್ಯರೇನಾರ್ಯರೇನೆತ್ತಲಿದೆ
ಭೇದ? ನಾವಚಿರಾದನಾರ್ಯರನ್ನಿನ್ನಾರ್ಯ

ಜಾತಿಯಲಿ ಹೀರಿಕೊಂಬುದೆ ಸಮಂಜಸವೈಸೆ?
ಇಂದದೆಮ್ಮಯ ಧರ್ಮವೈಸೆ? ಕಾರ್ಯವದೈಸೆ?
ನಮ್ಮಾರ್ಯತನಕಿನ್ನನಾರ್ಯರೆ ಗಡಾ ನಿಕಷ!
ಕೀಳು ಬೆರಸೆ ಸುವರ್ಣ ರಾಜಮಕುಟವಹಂತೆ,
ಅಂಜಲಿಯ ಪೂವೆರಡು ಕೆಯ್ಯ ಕಮ್ಮಿಸುವಂತೆ,
ನಾವನಾರ್ಯರನೊಳಗಿಸೆ ಸಮಾಜದ ಪುರೋಭಿ
ವೃದ್ಧಿ ತಾನುತ್ತರೋತ್ತರವಹುದು ಕಂಡಿತಂ!
ಅಲ್ಲದಡೆ ಆರ್ಯರೀ ವರ್ಣಾಭಿಮಾನದತಿ
ದರ್ಪದಿಂದಾರ್ಯತೆಯೆ ಅತಿವೃಷ್ಟಿಯಾಗೆ ಕೆ
ಯ್ಯೋಲು ನೆರೆಯ ಪಾಲೊ ಅಥವಾ ಕೊಳೆಯ ಪಾಲೊ ತಾ
ನಾಗುವುದು ನಿಶ್ಚಯಂ! ಆದಡಾಃ ಕಿವಿಗುಡುವ
ರಾರೀ ಅರಣ್ಯರುದಿತಕೆ? ಮಹಾಯುದ್ಧವಿ
ನ್ನಾಗದೀ ಸೆಣಸಾಟ ತೀರುವಂತಿಲ್ಲ, ನಾ
ವವರೊಡನೆ ಸೇರುವಂತಿಲ್ಲ.

(ಶೂನ್ಯದೃಷ್ಟಿಯಾಗಿ)

ಕುರುಕುವರರೊಳೆ
ಮೊಳೆತಕಟಸೂಯೆ ಕೌರವರು ಪಾಂಡವರೆಂದು
ದ್ವೈಧದ ತೃಣಾಗ್ನಿ ಕೊಮೆಕೊಮೆದು ಸಿಮಿಸಿಮಿಸುತಿದೆ!
ಎಂದಿಗಾವ ದವಾಗ್ನಿಯಾಗಿ ಧಗಧಗಿಸುವುದೊ!

ಗೊಂದಳ

ಇತ್ತ ನೋಡಾಚಾರ್ಯ ಪಾರ್ಥನಯ್ತಂದಪಂ.

(ಆರ್ಜುನನು ಪ್ರವೇತಿಸುವನು)

ದ್ರೋಣ

ಏನಿದೇನಿದು ಪಾರ್ಥ? ಜೋಲು ಮೋರೆ ಇದೇಕೆ?
ಮೃಗಯೆಯಾಗಿಲ್ಲವೆ ಯಥೇಚ್ಛ?

(ಅರ್ಜುನನು ಮಾತನಾಡನು)

ಕೌರವರೊಡನೆ

ಕಲಹವಾಗಿಲ್ಲವಲ್ಲವೆ? ನೋಡು ಕಂದ ನೀ
ಅಖಿಲ ಭಾರತ ಸಾರ್ವಭೌಮವಂಶದಿ ಜನ್ಮ
ವೆತ್ತಿಹಿರಿ; ಇಂದಿನಂತಃಕಲಹವನ್ನಲ್ಲಿ
ನದಿಸದಿರೆ, ನಿಮ್ಮೊಳಗೆ ಮುಂದೆ ಸಂಗರವಾಗೆ
ಭಾರತದ ಗತಿಯೇನು? ಕ್ಷತ್ರಕುಳಿವುಂಟೇನು?
ಧರ್ಮಜಂ ಕಲಹವಿರುವಲ್ಲಿ ಕಾಲೂರ, ನೀ
ಕಲಹದಲಿ ಸೇರದೆಲ್ಲವ ತಾಳಿಕೊಳ್ಳಯ್ಯ!

(ಅರ್ಜುನನು ಇನ್ನೂ ಮಾತನಾಡನು. ದ್ರೋಣನು ಅವನ ಮುಖವನ್ನೇ ಆರಯ್ದು)

ದ್ರೋಣ

ಕಂಡಿಲ್ಲ, ಕಾಣೆ ನಾನರ್ಜುನನ ಸಿರಿವೊಗದಿ
ಹಾಸ್ಯವನ್ನಲ್ಲ ದೌದಾಸ್ಯವನ್ನೇನಾಯ್ತು?
ಏನಾಯ್ತು? ಹೇಳಬಾರದೆ ಕಂದ?

ಅರ್ಜುನ

(ನೆಲವನ್ನು ಗೀಚುತ್ತ ಮೆಲ್ಲನೆ)

ಗುರುದೇವ,
ತಮ್ಮಡಿಯ ಶಿಷ್ಯನೆನೆ ಇನ್ನಾನನರ್ಹನೆಂ.

ದ್ರೋಣ

(ಚಕಿತನಾಗಿ)

ಏನೆಂಬೆ? ಬಾಣವೆಂಬುದೆ ಧನುಷ್ಮಕೆ ಸಲ್ಲೆ
ನೆಂದು? ನಯನಕೆ ಕನೀನಿಕೆ ಸಲ್ಲೆನೆನ್ನುವುದೆ?
ನೀನೆನ್ನ ಪಟ್ಟಶಿಷ್ಯಂ! ಭಾವಿ ಜಗದೇಕ
ಧನ್ವಿಯೆ ಮದೇಕ ಶಿಷ್ಯಂ ಪಾರ್ಥನೆಂಬುವಭಿ
ಮಾನಕೇಂ ನೀರ್ಬಿಡಲೆ? ನನ್ನ ಹೆಸರಂ ಜಗದಿ

ನಿನ್ನಿಂ ಚಿರಸ್ಥಾಯಿಸುವೆನೆಂಬ ಪಂಥಕ್ಕೇಂ
ಮಣ್ಣೂಡಿಸಲೆ?—

ಗೊಂದಲ

ಬಿಡಿಸಿ ನಿರವಿಸೇತಕೆ ಕಂದ? ೫೫೫

ಅರ್ಜುನ

(ವಿಷಣ್ಣನಾಗಿ)

ಗುರುದೇವ, ಕಳೆದುವಾ ದಿನವಿಂದಿಗರ್ಜುನಂ
ಜಗದೇಕ ಧನ್ವಿ ಎಂತಲ್ಲ, ಧನ್ವಿಯೆ ಅಲ್ಲ!
ಇಂದೆ ಮುಂಜಾನೆ ಬೇಟೆಗೆ ಹೋಗುವೆಮ್ಮ ಮುಂ
ದಟ್ಟಿದಾ ಜಾಯಿಲಂಗಳ ಬಾಯಿತುಂಬ ಹುಸಿ
ಕಣೆ ತುರುಕೆ ಮರಳಿದವು, ಗಾಯವೆಳ್ಳನಿತಿಲ್ಲ! ೬೦
ಏಂ ಶಬ್ದವೇಧವೇನಪ್ರತಿಮ ಲಾಘವಂ!
ಎನಿತೊ ದಿನದಿಂ ಕಲಿವೆನಾಗೆ ತಮ್ಮೊಳು ಗುರುವೆ
ಇಂತದ್ವಿತೀಯ ಕೌಶಲವಿನ್ನುಮೆನಗೆಡೆಯ.

ದ್ರೋಣ

(ಆಶ್ಚರ್ಯದಿಂದ ಹಾಗೂ ಕೋಪದಿಂದ)

ಏಂ ಜಗದಿ ಪಾರ್ಥನನ್ನತಿಪಾರ್ಥಿಸುವನೊಳನೆ?
ಯಾರವಂ? ಯಾರವಂ?

ಅರ್ಜುನ

ಇಲ್ಲೆ ಬಳಿಯವನೊಬ್ಬ ೬೫
ಭಿಲ್ಲರ ಯುವಕನಂತೆ!

ದ್ರೋಣ

(ಹುಬ್ಬುಗಂಟಿಕ್ಕಿ)

ಭಿಲ್ಲ? ಮೇಣ್ಯಾಡಾಡಿ?

ಅರ್ಜುನ

(ದ್ರೋಣಾಚಾರ್ಯನ ಮೋರೆ ನೋಡಿ)

ಮೇಣಮಮ ಗುರುವೆ,

(ಕಣ್ಣನ್ನು ಬಗ್ಗಿಸಿ)
ದ್ರೋಣಾಚಾರ್ಯರವನ ಗುರು
ವಂತೆ!

ದ್ರೋಣ
(ಆಶ್ಚರ್ಯದಿಂದ)
ಏನೆನ್ನ ಶಿಷ್ಯನೆ? ನಾನವನನರಿಯೆ!

ಗೊಂದಳ
ಆಚಾರ್ಯ, ಎಂದು ನಿನ್ನಯ ಬಳಿಗೆ ವಿದ್ಯೆಯಂ
ಕಲಿಸೆಂದು ಬಂದವನ ಕಲಿಸೆನೆಂದಂತು ಹಿಂ
ದಟ್ಟಿದೆಯೊ, ಅಂದಿನಿಂದಿಲ್ಲೆ ಅರಳಿಯ ಬುಡದ
ಮಂಡವಿಗೆಯಲಿ ನಿನ್ನ ಮಣ್ಣ ಗೊಂಬೆಯನಿರಿಸಿ
ಅದರ ಮುಂದೆ ದಿನಾಲು ಬಿಸಿಲೊ ಗಾಳಿಯೊ ಚಳಿಯೊ
ಮಳೆಯೊ ಎನ್ನದೆ ಧನುರ್ವಿದ್ಯೆಯನ್ನಭ್ಯಾಸ
ಗೆಯ್ದಾಗ ಪರ್ಯಾಪ್ತನಾಗಿರುವನೈ ಏಕ
ಲವ್ಯನಾ ಭಿಲ್ಲಕುವರಂ. ಕೆಯ್ತವನದಿದು!

ದ್ರೋಣ
ಯಾರೇಕಲವ್ಯನೇ? ನನ್ನ ಬಳಿಗವನೊಮ್ಮೆ
ಬಂದಂತೆ ಹೊಳೆಯುತಿದೆ!

ಗೊಂದಳ
ಹಿಂದೆ ನೋಡಾಚಾರ್ಯ,
ಆ ಅರಳಿಕಟ್ಟೆ, ಅಲ್ಲಿದೆ ನಿನ್ನ ಮೃಣ್ಮೂರ್ತಿ.

(ದ್ರೋಣನೂ ಅರ್ಜುನನೂ ಕೆಲವು ಹೆಜ್ಜೆ ಹಿಂದಕ್ಕೆ ಹೋಗಿ ಆ ಮೂರ್ತಿಯನ್ನು ನೋಡಿ ಬಂದು)

ದ್ರೋಣ
ಆಃ ನನ್ನ ಜೀವಂತಮೂರ್ತಿ! ಈತನೊ ನಾನೊ
ದ್ರೋಣನೆಂದರಿಯದನಿತರ ಕೌಶಲಸ್ಫೂರ್ತಿ!

(ತೆರೆಯಲ್ಲಿ)

ಏಕಲವ್ಯ

ಯಾರೊ ಬೇಟೆಗೆ ಇತ್ತ ಬಂದಿಹರು, ನೆಲವೆಲರ
ಮೂಸಿ ಮುಂದೋಡಿ ಬಹ ಹಿಂಡುನಾಯ್ಗಳ ಕಂಡೆ.
ಕುರುಕುವರರೊಡನೆ ಬಂಡಪನೆಂಬ ಗುರುದೇವ
ನಿನಿತರೊಳೆ ಇತ್ತಲಯ್ದಿರಲಾರನಿವರಾರ್ಗೆ?

ಗೊಂದಳ

(ಕವಿಗೊಟ್ಟು ಕೇಳಿ)

ಕೇಳುತಿದೆ ಮಾತಿದುಗೊ! ತೊಗಟೆಕುಪ್ಪಸ ತೊಟ್ಟು
ತೊಗಲ ಚಲ್ಲಣ ಉಟ್ಟು ಬಂದನಿತ್ತಲೆ ನೋಡ!

(ತೆರೆಯಲ್ಲಿ)

ಏಕಲವ್ಯ

ಮುಂದೊತ್ತುವ ನಾಯ್ಗಳ ಬೊಗಳುವ ಬಾಯ್ಗಳ ಗೇಣಂಬುಗಳಿಂ ಕಟ್ಟಿದೆನು,
ಒಂದಡಿ ಮುಂದಿಡದಂತವನಾಂ ತಡೆದಂತೊಡೆಯರೆಡೆಗೆ ಹಿಂದಟ್ಟಿದೆನು!
ಮೂಗಗೆ ಮೂಕೆರೆದೆ, ಜಗಳಕೆ ಕರೆದೆ, ಕಣ್ಣಿಡುವೆನವರ ದಾರಿಯಲಿ,
ಹಲ ಜನರವರಾಗೆ ಅವರೊಳು ತಾಗೆ ಕಾದುವೆ ನಾನಿಚ್ಛಾರಿಯಲಿ!

(ಸಿಳ್ಳು ಹಾಕುತ್ತ)

ಸುಸು ಸೂಸೂ ಸೂಸೂ ಸುಸುಸೂ ಸೂಸೂ ಸುಸುಸೂ ಸೂಸೂ
ಸೂ ಸೂ ಸೂ.

(ಹೆದೆ ಏಟುತ್ತ)

ರುರು ರೂಂರೂಂ ರೂಂರೂಂ ರುರುರೂಂ ರೂಂರೂಂ ರುರುರೂಂ ರೂಂರೂಂ
ರೂಂ ರೂಂ ರೂಂ.

ಅರ್ಜುನ

(ತನ್ನಲ್ಲಿ)

ಏನಿದಿಚ್ಛಾರಿಗೊಂಡೆಸೆದಪನೆ? ಈ ಗಹನ
ವಿದ್ಯೆಯಂ ನಾನನಿತೆ ಬಲ್ಲೆನೆಂದೆಣಿಸಿದ್ದೆ!

ಏಕಲವ್ಯ

(ಮುಂದೆ ಬಂದು)

ಅಮಮ ಗುರುದೇವನೇ?

(ತನ್ನ ಬಿಲ್ಲಂಬುಗಳನ್ನು ದ್ರೋಣನ ಕಾಲ ಬುಡದಲ್ಲಿ ಮಡಗಿ)

ಪೊಡಮಡುವೆನಡಿಗೆ. ತಾ
ವೆಂದು ತಿಳಿಯದೆ ತಮ್ಮ ನಾಯ್ಗಳಲಿ ಕೆಯ್ಗೆಯ್ದ
ತಪ್ಪಿಗೆನ್ನನು ಕ್ಷಮಿಸಿ ದೇವ!

ದ್ರೋಣ

(ನಗುತ್ತ)

ಬಾ, ಬಾರೇಕ
ಲವ್ಯ, ಮೆಚ್ಚಿದೆನು ನಿನ್ನತುಲ ಧಾನುಷ್ಕತೆಗೆ!

ಏಕಲವ್ಯ

ಎಲ್ಲವಿದು ದೇವ ತಮ್ಮಡಿಯರುಳೆ!

ಅರ್ಜುನ

(ಹುಬ್ಬನ್ನು ಮೇಲಕ್ಕೆತ್ತಿ)

ಗುರುದೇವ
ನಾಜ್ಞೆಯಂ ಪಡೆದೆಯೇಂ ಕಲಿಯೆ?

ಏಕಲವ್ಯ

ಕೇಳೈ ಕ್ಷತ್ರ
ಕುವರ, ಗುರುದೇವನಂದೆನ್ನ ಬೀಳ್ಕೊಡುವಂದು
ಕಾಮಿತಾರ್ಥವ ನಿನ್ನ ಪೂರಯಿಸಲೀಶ್ವರಂ
ಬಿಲ್ಲಾಣನಾಗೆಂದು ಹರಸಿದುದೆ ನನಗಾಜ್ಞೆ
ಮೇಣದುವೆ ನನ್ನ ಕಲಿಕೆಗೆ ಗಡಾ ಶ್ರೀಕಾರ!

(ಅರ್ಜುನನು ದ್ರೋಣನ ಕಡೆಗೆ ನೋಡಿ ತಲೆ ಬಗ್ಗಿಸುವನು)

ಏಕಲವ್ಯ
(ದ್ರೋಣನ ಕಡೆಗೆ ನೋಡಿ)
ಆದಡಿನ್ನೆಗಮೆನ್ನ ವಿದ್ಯೆಯನ್ನುದ್ಯಾಪಿ
ಸಿದೆನಿಲ್ಲ —

ದ್ರೋಣ
(ಆಲೋಚಿಸುತ್ತ)
ಅಂತಾಗೆ ನಿನ್ನ ಗುರು ನಾನೆ?

ಏಕಲವ್ಯ
ತಾ
ವಲ್ಲದಿನ್ನಾರು ಗುರುದೇವ?

ದ್ರೋಣ
(ನಸುನಗುತ್ತ)
ಅಂತೆನಲು ಗುರು
ದಕ್ಷಿಣೆಯ ನೀಡಬೇಡಾ ಕಂದ? ೧೧೦

ಏಕಲವ್ಯ
ಗುರುದೇವ
ಅದನೆ ಹೇಳುತಲಿದ್ದೆ, ಗುರುದಕ್ಷಿಣೆಯ ತಮಗೆ
ತೆತ್ತಿಲ್ಲವೆಂದೆ ನನ್ನಯ ವಿದ್ಯೆಯುಜ್ಜವಣೆ
ಯಾಗಿಲ್ಲವೆಂದೆ.

ಗೊಂದಳ
ಅದನೀಯೆ ತಮ್ಮಯ ಬಳಿಗೆ
ಇಂದೆ ಹೊರಡುವನಿದ್ದ, ತಾವಿತ್ತ ಬಹ ಸುದ್ದಿ
ಕೇಳಿ ತಮ್ಮಯ ದಾರಿ ನೋಡುತಿಲ್ಲಿಯೆ ನಿಂದ. ೧೧೫

ಏಕಲವ್ಯ
ಹೆಸರಿಸಿರಿ ದೇವ ದಕ್ಷಿಣೆಯ, ತಮ್ಮಲಿ ಕಲಿತ
ವಿದ್ಯೆಗೀ ಜೀವವನೆ ಮಾರಿತ್ತೆ.

ದ್ರೋಣ

(ನಗುತ್ತ)

ಏನೆಂಬೆ

ನಿನ್ನ ಬಲಗೈಯ್ಯ ಹೆಬ್ಬೆರಳನೀ ಎನೆ ಕಂದ?

ಏಕಲವ್ಯ

ಇತ್ತೆನಿದೊ ಗುರುದೇವ!

(ದ್ರೋಣನ ಕಾಲ ಬಳಿಯಲ್ಲಿ ಮಡಗಿದ್ದ ತನ್ನ ಬತ್ತಳಿಕೆಯಿಂದ ಒಂದು ಹೆರೆಯಂಬನ್ನು ಕಿತ್ತು ನೆಲದಲ್ಲಿ ಮುಂಡಿಯೂರಿ ಕುಳಿತು ಅದರ ಹೆರೆಯಿಂದ ತನ್ನ ಬಲಗೈಯ್ಯ ಹೆಬ್ಬೆರಳನ್ನು ಕಟಕ್ಕನೆ ಕಡಿದು ದ್ರೋಣನ ಕಾಲ ಬುಡದಲ್ಲಿ ನೀಡುವನು. ನೆತ್ತರಿನ ಹೊನಲು ಹರಿವುದು. ಆಶ್ಚರ್ಯಚಕಿತನಾಗಿ ದ್ರೋಣನು ಒಂದಡಿ ಹಿಂದಕ್ಕೆ ಮಾಲಿ ನಿಲ್ಲುವನು, ಅರ್ಜುನನು ಹತ್ತಿರದೊಂದು ಮರಕ್ಕೆ ಆತುಕೊಳ್ಳುವನು.)

ಗೊಂದಳ

(ನಿಬ್ಬೆರಗಾಗಿ)

ಹಾಹಾ ಮಹಾಪಾಪ!

(ದ್ರೋಣನು ಹಾಗೆ ನಿಂತಲ್ಲಿಂದ ಮುಂದೆ ಬಂದು ಏಕಲವ್ಯನ ಬಳಿಯಲ್ಲಿ ತಾನೂ ಮುಂಡಿಯೂರಿ ಕುಳಿತು ತನ್ನ ಬಟ್ಟೆಯಿಂದ ಆ ಗಾಯವನ್ನು ಒಂದು ಕೈಯ್ಯಿಂದ ಬಿಮ್ಮಗೆ ಕಟ್ಟಿ ಹಿಡಿದು ಮತ್ತೊಂದು ಕೈಯ್ಯಿಂದ ಅತನ ತಲೆಯನ್ನು ಸವರುತ್ತ)

ದ್ರೋಣ

(ದುಃಖದಿಂದ ಹಾಗೂ ವಿಸ್ಮಯದಿಂದ)

ಏಂ ಗೆಯ್ದೆ! ಏಂ ಗೆಯ್ದೆ!

ಏಕಲವ್ಯ

(ತಟ್ಟನೆ ಕುಳಿತುಕೊಂಡಲ್ಲಿಂದ ನಗುತ್ತ)

ಕೇ...ಳ್ದ...ಬೆರ...ಳಂ...ಕೊಯ್ದೆ... ೧೨೦

ಕತ್ತಿ...ತಮ್ಮ...ದೆನೆ...ಹಿಡಿ...ತಮ್ಮ...ದಲ್ಲವೆ...ದೇವ?

ಅರ್ಜುನ

(ದುಃಖದಿಂದ)

ಅಕಟಾ ಗೆಳೆಯ ಮಹಾ ಸಾಸವೆಸಗಿದೆಯಲ್ಲ!

ದ್ರೋಣ

(ದುಃಖದಿಂದ)

ಅಕಟಕಟ ಬಿನದವನ್ನೇರೆಣಿಸಿದೆಯ ಕಂದ!
ನಾರಾಯಣಂ ನಿನ್ನ ರಕ್ಷಿಸಲಿ ಹಸುಗೂಸೆ!

(ಆಗಲೆ ಅಲ್ಲಿಗೆ ತಕ್ಕಷ್ಟು ದೂರದ ಒಂದು ಮರದ ಹಿಂದಕ್ಕೆ ಬಂದು ಮುಟ್ಟಿದ ಹಿರಣ್ಯಧನು ತಟ್ಟನೆ ಮುಂದೆ ಬಂದು ಏಕಲವ್ಯನನ್ನು ದ್ರೋಣನ ಕೆಯ್ಯಿಂದ ಸೆಳ ಕೊಂಡು, ತಣ್ಣೇರಲ್ಲಿ ಅದ್ದಿ ತಂದ ತನ್ನ ತಲೆಸುತ್ತಿನಿಂದ ಅವನ ಗಾಯವನ್ನು ಬಿಮ್ಮಗೆ ಸುತ್ತಿ ಹಿಡಿದು, ಕೋಪದಿಂದ ಹುಬ್ಬುಗಂಟಿಕ್ಕಿ ದ್ರೋಣನ ಕಡೆಗೆ ನೋಡಿ)

ಹಿರಣ್ಯಧನು

ಬಿಲ್ಲೋಜ, ಭಿಲ್ಲನಂ ಮುಟ್ಟಿ ಮಡಿಗೆಡದಿರೈ! ೧೨೫
ನಿಮ್ಮ ಪಟ್ಟಿಯ ಬಟ್ಟಿಯನ್ನವನ ನೆತ್ತರಲಿ
ನನಸಿ ಹೊಲೆಯಿಸದಿರೈ! ಬೆಂಕಿ ಹಚ್ಚಿ ಸುತಿನ್ನು
ನೀರಿಗೋಡಾಡುವಿರೆ? ಈ ಬಗೆಯ ಬಿನದವ
ನ್ನಾರ್ಯರಲ್ಲದನಾರ್ಯರರಿಯರಕಟಾ! ನೋಡಿ
ನಿಮ್ಮಾ ವಿನೋದವಿಂದೆಮ್ಮ ಜೀವಕೆ ಬಂತು! ೧೩೦

ಗೊಂದಳ

(ದುಃಖದಿಂದ)

ಅಕಟ ನೀನಿನ್ನೆವರಮಾಚರಿಸಿದ ತಪಸ್ಯೆ
ಕತ್ತಿ ಮುರಿದಾ ಕೋಶವಾಯ್ತೆ? ಮಕ್ಕಳ ಮರಳ
ಮನೆಯಾಯ್ತೆ? ನಿನ್ನ ಕಟ್ಟಿಸಕ ಕಡೆಯಂಗಡಿಯ
ವ್ಯಾಪಾರವಾಯ್ತೆ? ಅಕಟಿನ್ನೆಸುಗೆ ಮೂಗನಾ
ಕನಸಾಯ್ತೆ? ಕಂದ, ಇನ್ನೇವೆ? ಇನ್ನೆಂತೆಸೆವೆ? ೧೩೫

ಹಿರಣ್ಯ

(ಗಾಯವನ್ನು ಬಿಚ್ಚಿನೋಡಿ ಕೆರಳಿ ದ್ರೋಣನ ಕಡೆಗೆ ನೋಡಿ)

ಅಹಹ ಘಾತಾಳಿಕೆಯೊ! ಅಹಹ ಕಪಟವೊ! ಶಠವೊ!
ಅಹಹ ವಿಶ್ವಾಸಘಾತವೊ! ಕಣ್ಣಿನಲಿ ನೆತ್ತ
ರೂರದೀ ನಿರ್ದಯವೊ! ಕುರಿಗೆ ತೋಳನ ಮುತ್ತೊ!
ಅಹಹ ಕೇದಗೆ ನಗೆಯೊ! ಹೊಡೆಯ ಹಾವಿನ ಹಗೆಯೊ!

(ಏಕಲವ್ಯನಿಗೆ)

ಸಂತಮಿರುವೆಯ ಕಂದ? ನೋವಣಮೆ ಮಾಣ್ದಪುದೆ? ೧೪೦
ಮೈ ಬೆಚಗಿದೆ.

(ಆಕಾಶದ ಕಡೆಗೆ ಕಣ್ಣೆತ್ತಿ)

ದೇವ, ಅಕಟಿವನ ನೊಸಲಲ್ಲಿ
ತಿಂಗಳಂ ಬರೆವೋಗಿ *ಚಾಳಿಯಂ ಗೀಚಿದೆಯೊ!
ಚಿಂತೆ ಇಲ್ಲಿನ್ನಾದಡೆನ್ನ ಬಸಿರಂ ತಣಿಸು!
ನನ್ನ ಕಂದನನೊಮ್ಮೆ ನನಗೆ ನೀನುಳಿಸಿಕೊಡು!
ನಟ್ಟಿ ನೀರೊಳಗೊಡೆಯ ನನ್ನ ಕೆಯ್ಪಿಡಬೇಡ! ೧೪೫

(ಮರಳಿ ದ್ರೋಣನ ಕಡೆಗೆ ನೋಡಿ)

ಆರ್ಯ ತಾನಂತೆ! ಭೂಸುರನಂತೆ! ಆಚಾರ್ಯ
ನಂತೆ! ಶಾಸ್ತ್ರವ ಸುಟ್ಟು ಬಿಟ್ಟಿರೇಂ? ಧರ್ಮವ
ನ್ನಾವ ಕಾಡಟ್ಟಿದಿರಿ? ನಾವನಾರ್ಯರುಮೆಸಗ
ದೀ ಪಿಶಾಚಿಕೆಯನಕಟೆಸಗಿದಿರೆ? ತಮ್ಮಾವ
ಕುದುರೆಗಳ ಹೊಡೆದನಕಟೀ ಬಾಲ?

(ಏಕಲವ್ಯನಿಗೆ)

ಸಯ್ತಿಹೆಯ? ೧೫೦
ಬೇನೆ ಕೊರೆವುದೆ?

(ಮರಳಿ ದ್ರೋಣನ ಕಡೆಗೆ ನೋಡಿ)

ಛಿಲ್ಲನಕ್ಕೆ, ಅಣುಗೂಸೈಸೆ?
ಹಾಲುಹಲ್ಲುದುರಿಲ್ಲ, ಕೊರಳಿನ್ನುಮೊಡೆದಿಲ್ಲ!
ಕೂಸಿನಲ್ಲಿನಿಸಾನು ಕರುಳಿಲ್ಲದಾಯ್ತೆ ಕಟ!
ಅವನ ಬೆರಳೆಡೆಯೊಳೆನ್ನಯ ಬೆರಳ ಕೇಳಲಾಂ
ಕೊಡುತಿದ್ದೆನಲ್ಲ! ಹಾ!

(ಏಕಲವ್ಯನಿಗೆ)

ಕಂದ ನೆತ್ತರ ಬಸಿತ ೧೫೫
ಹಿಂಚಿಹುದೆ? ಉಸಿರೆ ಏತಕೊ? ಕಣ್ಣು ಬಿಡೆ ಏಕೊ?

---

* ಚಾಳಿ = ರಾಹು.

(ದ್ರೋಣನಿಗೆ)

ಮಬ್ಬೊಳುರಿಕಣ್ಣಿಂದ ಕಬ್ಬುಲಿಯನರಿವಂತೆ
ತಮ್ಮಾರ್ಯತನವಿಂತಸೂಯೆಯಿಂ ಬಯಲಾಯ್ತು!

ದ್ರೋಣ

ಗೆಳೆಯ, ಮನಸಾರೆ ಶಪಿಸೆನ್ನ! ನಾ ತಲೆಯೊಳಾಂ
ತಪೆನದಂ! ಕೇಳ, ನನ್ನಪರಾಧದಾ ಮುಂದೆ ೧೬೦
ನಿನ್ನ ಬಸಿರುರಿಯ ಮುಂದಾವ ನಿನ್ನ ಗರಿಷ್ಠ
ಶಾಪಂ ಲಘಿಷ್ಠ ಗಡ! ನಂಬು ನೀ ನಂಬದಿರು,
ಪರಿಹಾಸಕೆಂದೆ ನಾ ಬೆರಳ ಕೇಳಿದೆ, ಮಾತು
ಮುಗಿವ ಮುನ್ನಮೆ ನಿನ್ನ ಮಗನದಂ ತರಿದಿತ್ತ!

ಹಿರಣ್ಯ

(ಕೊಂಚ ಮುನಿಸಿಳಿದು)

ಸಪಿಸಲಾನೆಲ್ಲಿ? ಸಾಪಂಗೊಳುವ ತಾವೆಲ್ಲಿ? ೧೬೫
ತಮ್ಮ ಶಿಷ್ಯರಿಗಿವಂ ಸರಿಯಹನೊ? ಮಿಗಿಲಹನೊ?
ಎಂದೆ ಕರುಬಿಂದ ಬೆರಳಂ ಕೇಳ್ದಿರೆಂದೆನ್ನ
ಗೊಣಗುತಿಹ ಮನವ ಮಾಣಿಸಲಾಸ! ಯಾವೊಂದು
ಕೆಲಸವನ್ನೆಸಗಲೆಸಗಿದ ಕೆಡುಕೆ ಕೊನೆಗದಕೆ
ಮುಳುವಹುದು! ಇದರೊಳಿಬ್ಬಗೆ ಎಡೆಯ!

(ದ್ರೋಣನು ಅವನನ್ನೇ ನಿಟ್ಟಿಸಿ ಅರ್ಜುನನ ಕಡೆಗೆ ನೋಡುವನು)

ಹಿರಣ್ಯಧನು

(ಆಕಾಶದ ಕಡೆಗೆ ಸುಟ್ಟಿ)

ಮೇಲೊಬ್ಬ ೧೭೦
ನಿಹನಾತನೊಳಗೆ ಹೊರಗೆಲ್ಲವಂ ನೋಡುತಿಹ
ನವನಿಗಿದನೊಪ್ಪಿಸಿಹೆ!

ದ್ರೋಣ

ಸುಂಕ ತಪ್ಪಿಸೆ ಹೇರ
ನೊಪ್ಪಿಸಿದೆನಾದೊಡಂ ಶಪಿಸದೆನ್ನೊಜ್ಜಿಯಂ
ಹಿಗ್ಗಿಸಿದೆ! ಮೇಲೊಬ್ಬನಿಹನವನಿಗೊಪ್ಪಿಸಿಹೆ
ನೆನಲಣಮೆ ಕುಗ್ಗಿತೆನ್ನಯ ಭಾರ! ನಮ್ಮದೀ ೧೭೫
ವೈಮತ್ಯವನ್ನವನಿಗೊಂದಾಗಿ ಒಪ್ಪಿಸುವ!
ಅವನೆ ತೀರ್ಚುಗೆ! ಅಲಮ್!

ಹಿರಣ್ಯ

(ಏಕಲವ್ಯನಿಗೆ)

ಆಡೆ ಏತಕೊ ಕಂದ?
ಜೋರು ನಿತ್ತಿತೆ?

(ಗೊಂದಳದವರಿಗೆ)

ಕೊಂಚ ನೀರು ತಾರಿರೆ ಅಣ್ಣ?

ಗೊಂದಳ

(ನೀರು ತಂದು)

ತಂದೆವಿದೊ!

ಹಿರಣ್ಯ

(ಏಕಲವ್ಯನಿಗೆ ನೀರು ಕುಡಿಸುತ್ತ)

ಆತು ಕುಡಿ!

ಗೊಂದಳ

ಬಾಯೆತ್ತುತಿಹ ಕೇಳ್ವ.

ಏಕಲವ್ಯ

(ಕೊಂಚ ತೆಪ್ಪತ್ತುಕೊಂಡು ಕುಳಿತಲ್ಲಿಂದಲೆ)

ಬೆಪ್ಪ...ಳಿಸ...ದಿರು...ತಾತ...ತೆಪ್ಪ...ಗಿಹೆ...ನಾ...ನೋಡ.
೧೮೦

ಗೊಂದಳ

ಮಾತು ಕೇಳದು, ಕೊಂಚ ಹತ್ತಿರಕೆ ಸರಿರಣ್ಣ!

ಏಕಲವ್ಯ

ಗುರು . . . ವಿನ . . . ಕೃಪೆ . . . ಯೊಂದೆ . . . ಇದ್ದರೆ . . . ತಂದೆ . .
ಎಡಹೆ . . . ಬ್ಬೆರಳಿ . . . ಲ್ಲವೆ . . . ಮತ್ತೆ? . . .
ಆರಿ . . . ಯೆನೆ? . . . ಇಚ್ಚಾರಿ? . . . ಇನ್ನಿದೊ . . . ನಾರಿ . . . ಎಳೆ . .
ದೆಸೆ . . . ಯುವೆ . . . ನದ . . . ನಮು . . . ಕುತ್ತೆ

ಗೊಂದಳ

ನೀರು ಕುಡಿವೆಯ ಕಂದ?

ಏಕಲವ್ಯ

ಕೊಂಚ . . . ಕುಡಿ . . . ಸೈ . . . ತಾತ.

(ನೀರು ಕುಡಿದು)

ನೀ . . . ನಕಟಾ . . . ಬರಿದೆ . . . ಗುರುವನು . . , ಜರಿದೆ . . . ಬಿನದಕೆ . . .
ನುಡಿ . . . ದರೆ . . . ನೇ . . . ರೆಂದೆ . . . ಗಲಾಳ
ಬಗೆ . . . ದಳ್ಕನೆ . . . ಬೆರಳ . . . ನಿತ್ತಡೆ . . . ಮರುಳ . . . ನೆನ್ನದೊ . . .
ತಪ್ಪವ . . . ರದೊ . . . ತಂದೆ?

(ಸಿಳ್ಳುಹಾಕುತ್ತ)

ಸುಸು . . . ಸೂಸೂ . . . ಸೂಸೂ . . . ಸುಸುಸೂ . . . ಸೂಸೂ . . .
ಸುಸುಸೂ . . . ಸೂಸೂ . . . ಸೂ . . . ಸೂ . . . ಸೂ . . .

(ಬಾಯಿಂದಲೆ)

ರುರು . . . ರೂಂರೂಂ . . . ರೂಂರೂಂ . . . ರುರುರೂಂ . . . ರೂಂರೂಂ . . .
ರುರುರೂಂ . . . ರುರುರೂಂ . . . ರೂಂ . . . ರೂಂ . . . ರೂಂ . . .

ಹಿರಣ್ಯ

ನೀರು ಬೇಕೆಲೊ ಕಂದ?

ಏಕಲವ್ಯ

ಕೊಂಚ . . . ನೀಡೈ . . . ತಂದೆ.

(ಮರಳಿ ನೀರು ಕುಡಿದು)

ಸೆಣೆಯದಿರು . . . ತಾತ . . . ಗುರುದೇವನಲಿ! . . . ತಪ್ಪವರ . . . ೧೯೦

ದೇನಂತೆ? ... ಮೊದಲ ... ಬಾಯಿಗೆ ... ಬಂದುದಂ ... ನುಡಿಯೆ ...
ತಾತನಾ ... ಮಾತಿಗೆನ್ನಂ ... ಕ್ಷಮಿಸಿ ... ಗುರುದೇವ ...
ಹರಸಿ ... ಬೀಳ್ಕೊಡಿ ... ತಾತ ... ಬೆರಳಣಂ ... ಬಿಗಿವಿಡಿಯ.

ದ್ರೋಣ

(ಏಕಲವ್ಯನ ಮುಂದೆ ಮೊಣಕಾಲೂರಿ)

ನಿನ್ನ ಚಿತ್ತಸ್ಥೈರ್ಯದಾ ಧೈರ್ಯದೌದಾರ್ಯ
ದಾ ಶೌರ್ಯದಾ ಸತ್ಯವಿಕ್ರಮದ ಮುಂದೆ ನಾ
ಮೂಗುವಟ್ಟಿಹೆ ಕಂದ! ನಿನಗೆ ತಲೆವಾಗಿಸುವೆ
ನೆನ್ನ ಕ್ಷಮಿಸೆಯ ಬಾಲ?

ಏಕಲವ್ಯ

(ತಟ್ಟನೆ ಎದ್ದು ನಿಂತು ದ್ರೋಣನನ್ನು ಎತ್ತಿ ನಿಲ್ಲಿಸಿ)

ಏನೆಂದಿರಯ್ಯ ಗುರು
ದೇವ? ತಮ್ಮನು ನಾನೊ ಕ್ಷಮಿಸಲಕಟಾ! ... ಬಗೆಯಿ ...
ವಿಾನೆ ... ಮಡುವಂ ... ಕ್ಷಮಿಸೆ? ... ಮಾತೆ ... ಮೊಗವಂ ...
ಕ್ಷಮಿಸೆ? ...
ಎನಗೆ ... ತಲೆ ... ಬಾ ... ಗು ... ವು ... ದೆ?

(ದೊಪ್ಪನೆ ಕುಳಿತುಕೊಳ್ಳುವನು. ಹಿರಣ್ಯಧನು ಆ ಗಾಯವನ್ನು ಮರಳಿ ಕಟ್ಟಿ ಹಿಡಿವನು)

ದ್ರೋಣ

ಚಾಪ ಬಾಗದೆ ಶರಕೆ?
ನಿನ್ನ ಭಕ್ತಿಯ ಮುಂದೆ ನತನಾದೆನಾಂ ಕಂದ!

(ಹಿರಣ್ಯಧನುವಿಗೆ)

ಬಲ್ಲೆಯ ಚಿಕಿತ್ಸೆ ಈ ಆರ್ದ್ರಕ್ಷತಕೆ ಭಿಲ್ಲ
ರಾಣ್ಮ? ಇಲ್ಲಡೆ ಈತನನ್ನೆನ್ನ ಬಳಿಗೊಯ್ದು
ಔಷಧಿಸಿ ಮರಳಿ ಕಳುಹುವೆ, ಪೇಳ.

ಹಿರಣ್ಯ

ಆಚಾರ್ಯ,
ನಮ್ಮ ಪಾಳೆಯದೊಳಿಹರಾರ್ಯರರಿಯದ ಮದ್ದು

ಗಾರಿಕೆಯ ಒಲ್ಲ ಮುತ್ತವರು, ಕೇಳುಗುರೊಂದ
ನುಳಿದು ಬೆರಳಿಗೆ ಬೆರಳ ಬೆಳಸಲಾರ್ಪರು. ತಮಗೆ
ಬೇಡವಾ ಗೊಡವೆ, ಅವರಿಂ ಮದ್ದು ಮಾಡಿಸುವೆ.

ಏಕಲವ್ಯ

(ಕುಳಿತಲ್ಲೇ ದ್ರೋಣನಿಗೆ ತಲೆವಾಗಿ)

ಉಗುರಲ್ಲದೆ... ಮರಳೆ... ಬೆಳಸುವೆ... ಬೆರಳಿ... ನ್ನೆನ್ನುವ... ತಾತನ...
ನುಡಿಗೇಳಿ...
ಮರೆತುದು... ನೋವೆದೆಯೋ... ಸೆಳೆದಿಹ...ಹೆದೆಯೋ...
ಲುಬ್ಬಿದು... ದುಬ್ಬರಿಕೆಯ... ತಾಳಿ!... ೨೧೦
ಗುರುಮೂರ್ತಿಯ... ಮುಂದು... ಮುನ್ನೊಲೆ... ನಿಂದು... ಎಡಗೆ...
ಯ್ಯೊಳೆ... ಸರಳೂಡುವೆನು!...

(ಕುಳಿತಲ್ಲೆ ಕೆಯ್ಮುಗಿದು)

ನಮ್ಮಯ... ಮನೆಗಿಂದು... ಬರಬೇಕೆಂದು... ಕಾಲ್ಗೆರಗಿ... ಗುರುವೆ...
ಬೇಡುವೆನು.

(ಸಿಳ್ಳು ಹಾಕುತ್ತ)

ಸುಸು... ಸೂಸೂ... ಸೂಸೂ... ಸುಸುಸೂ... ಸೂಸೂ... ಸುಸುಸೂ...
ಸೂಸೂ... ಸೂ... ಸೂ... ಸೂ...

(ಬಾಯಿಂದಲೆ)

ರುರು... ರೂಂರೂಂ... ರೂಂರೂಂ... ರುರುರೂಂ... ರೂಂರೂಂ...
ರುರುರೂಂ... ರೂಂರೂಂ... ರೂಂ... ರೂಂ... ರೂಂ...
ತಾತ... ನೀಡವ್ವತಣವ... ಹಣ್ಣು ಹಂಪಲ... ಹಾಲ... ೨೧೫
ಜೇನು ಬೆಣ್ಣೆಯ... ಮೊಸರ... ನಿತ್ತು... ತಣಿಸ... ಯ್ಯವರ.

ಹಿರಣ್ಯ

ನಿನ್ನವ್ವತಣಮೆ ಕಂದ ನನ್ನವ್ವತಣಮುಮಲ್ತೆ?
ಬನ್ನಿರೆಮ್ಮಯ ಮನೆಗೆ, ದಾಂಟಿರೆಮ್ಮಯ ಹೊಸಲ,
ನಮ್ಮ ಕೊಡುವಿನಿಸು ತಿಂಡಿಯನುಂಡು ಹೋಗಿರೈ!
ಹಾಲು ಜೇನಂ ಕೂಡೆ ಕುಡಿದೆಮ್ಮ ಜಗಳವಂ ೨೨೦
ಮುಳುಗಿಸುವ, ಹಣ್ಣುಗೆಣಸಂ ತಿಂದು ತೇಗಿಸುವ!

ದ್ರೋಣ

ಭಿಲ್ಲವರ ಕೇಳ, ನಾವೆಲ್ಲ ನೂರಾರಿಹೆವು—

ಹಿರಣ್ಯ

ನಿಮಗೆ ಬೇಕಾದನಿತು ಹಾಲು ಹಣ್ಣುಗಳಿಮ್ಮ
ಪಾಳೆಯದೊಳುಂಟು, ಮನವೊಸೆದು ನೀವಯ್ತನ್ನಿ!

ಏಕಲವ್ಯ

ಗುರುದೇವ... ಶಬರಿ... ಇತ್ತೆಳಚಿಯಂ... ರಾಮನಿದೊ... ೨೨೫
ಮೆಲ್ಲಲಿಲ್ಲಾ?... ನಮ್ಮ... ತಿನಿಸೊ... ಶಬರಿಯ... ಬೊಗರಿ!

ದ್ರೋಣ

ಇಂದೆ ಬೇಡವೊ ಕಂದ, ನೆತ್ತಿಗೇರಿತು ಹೊತ್ತು,
ನಾಳೆ ಬಂದಪೆವು, ಬಾರದೆ ಹೋಗೆವೀಗ ನೀ
ಮನೆವೋಗಿ ಬೇಗನೆ ಚಿಕಿತ್ಸೆಯಂ ಮಾಡಿಸಾ!

ಏಕಲವ್ಯ

(ಎದ್ದು ನಿಂತು)

ಇನ್ನಾರೆನ್ಯೆ... ತಾತ... ಬೇಗ... ಮರಳುವ... ಮನೆಗೆ... ೨೩೦
ಪೊಡಮಡುವೆ... ಗುರುದೇವ... ಕೆಯ್ಮುಗಿವೆ... ಕುರುಕುವರ...
ಮನೆಗೆ... ಪೋಪೆವು.

ದ್ರೋಣ

(ಆತನ ತಲೆಯಲ್ಲಿ ಕೆಯ್ಯಿಟ್ಟು)

ಶತಂ ಜೀವ ಶರದೋ ವರ್ಧ

ಮಾನಃ! ಸುಖೀಭವ! ಮಹಾಧನ್ವಿಯಾಗು! ನಿ
ನ್ನಾಕಾಂಕ್ಷೆಯೆಲ್ಲ ಸಲ್ಲಿಸುಗೆ ನಾರಾಯಣಂ!
ನಾಳೆ ಮನೆಯಲಿ ಕಾಂಬ!

ಅರ್ಜುನ

ಮೆಚ್ಚಿದೆನು ಗೆಳೆಯ ನಾ ೨೩೫
ನಿನ್ನಸಮ ಸಾಹಸಕೆ, ಚಿರಕಾಲ ಬಾಳಿರೈ!

(ಹಿರಣ್ಯಧನು ದ್ರೋಣನಿಗೂ ಅರ್ಜುನನಿಗೂ ಕೆಯ್ಮುಗಿದು ಅವನೂ ಏಕಲವ್ಯನೂ ಹೋಗುವರು.)

ದ್ರೋಣ

(ಆಲೋಚಿಸಿ)

ಯಾವೊಂದು ಕೆಲಸವನ್ನೆಸಗಲೆಸಗಿದ ಕೆಡುಕೆ
ಕೊನೆಗದಕೆ ಮುಳುವೆಂದ ಭಿಲ್ಲರಾಣ್ಮನ ಮಾತು
ಕೇಳಿದೆಯ? ಅರ್ಥವಾಯಿತೆ ಪಾರ್ಥ?

ಅರ್ಜುನ

ಕೇಳ್ದೆ ಗುರು
ದೇವ, ನನಗರ್ಥವಾಗಿಲ್ಲ.

ದ್ರೋಣ

ಕೇಳಂತಾಗೆ ೨೪೦
ಕೌಂತೇಯ, ಏಕಲವ್ಯಂ ಯಾವ ಕುರುಕುಲದ
ಕುವರರಿಗೆ ಮಿಗಿಲೆನಿಸಿ ಅವರ ವಿದ್ಯಾಭ್ಯುದಯ
ಕವಘಾತವಹನೆಂದು ಬಗೆದು ನಾನವನ ಬೆರ
ಳೀಸಿದೆನೊ, ಆ ಕುರುಕುಲದ ನಾಶಕದೆ ಸಂಚ
ಕಾರವೆಂದವನಿಂತು ಸೂಚಿಸಿದನೈಸೆ? ಕೇ ೨೪೫
ಳಾರ್ಯರಿನ್ನುಮನಾರ್ಯರಂ ತಮ್ಮೊಳೊಳಕೊಳ್ಳ
ದಿರಲವನ ಮಾತೆ ಈಡೇರಲಿದೆ! ಅಕಟಕಟ
ಭಾರತಂ ನಿಃಕ್ಷತ್ರವಾಗಲಿದೆ!

ಅರ್ಜುನ

(ಚಿಂತಾಕ್ರಾಂತನಾಗಿ)

ಆಕಾಶ

ಹರಿದು ಬೀಳ್ವಂದಕಟ ಕೆಯ್ಯೊಳಿತ್ತಲೆ ದೇವ?
ಎಂತುಟೊ ವಿಧಾತನಾ ಸಂಕಲ್ಪವಂತೆ ತಾ
ನಹುದಲ್ಲದೆನಿತು ಪೇಚಾಡಿದೊಡಮನ್ಯಥಾ
ಅಹುದೆ? ಕಟ, ಭವಿತವ್ಯವನ್ನಭಾವಿಸಲಹುದೆ?

ದ್ರೋಣ

(ಸಿಟ್ಟುಸಿರುಬಿಟ್ಟು)

ಅಂತಕ್ಕೆ! ಅಂತಕ್ಕೆ! ಏನು ಸಾಹಸವಮಮ!—

(ಮೇಲೆ ನೋಡಿ)

ನಟ್ಟಿವಗಲಿಗೆ ಬಂತು—

(ವ್ಯಗ್ರನಾಗಿ)

ಭಳಿರೆ ಭಿಲ್ಲರ ಕುವರ!—
ಕಾವರಿದೊ ಶಿಬಿರಗಳೊಳೆಮ್ಮನಲ್ಲಿಗೆ ತೆರಳಿ—
ಏಂ ಗೆಯ್ದೆ! ಏಂ ಗೆಯ್ದೆ! ಕೇಳ್ದ ಮಾತಿಗೆ ಬೆರಳ—
ಆಹ್ನಿಕವ ಮುಗಿಸಿ—ತಟ್ಟನೆ ಕಡಿದು ನೀಡುವುದೆ?—
ಆರೋಗಣೆಯ ತೀರ್ಚಿ—ಮಾವೀರ! ಮಾಧೀರ!—
ನಾವಣಂ ವಾಮಕುಕ್ಷಿಯ ಗೆಯ್ವ!—ನೆನವಿಡೈ
ಪಾರ್ಥ, ಜಗದೊಳಗಿವಂ ಹೆಬ್ಬಾಳಲಿಹನಿವಗೆ
ನೀಡಿ ದೀರ್ಘಾಯುಷ್ಯವಂ ಜಗತ್ಪತಿ ಸಲಹ
ಬೇಕು ನಾರಾಯಣಂ!—ಶಿಬಿರದತ್ತಕೆ ನಡೆವ.

(ಹೋಗುವರು)

ಗೊಂದಳ

ಆರ್ಯರಿನ್ನಾದೊಡಮನಾರ್ಯರನ್ನೊಳಕೈಸಿ
ಇಬ್ಬರೊಂದಿಗೆ ಸಿತಾಸಿತೆಯಂತೆ ಹರಿಯಲೆಮ
ಏಕಲವ್ಯನ ಬೆರಳ ಬೆಲೆ ಬಂತು! ಅಂತಹುದೆ?
ಆತನೊಸೆದೆಸಗಿದಾತ್ಮಾರ್ಪಣಂ ಸಫಲಿಪುದೆ?

(ಕೊಂಚ ತಡೆದು)

ನೋಡಲಿದೆ, ನೋಡಲಿದೆ! ಜಲದಿ ವಿಾನಿನ ಕಾಲ,
ಬಹ ಭವಿಷ್ಯದ ಕಾಲ ಕಾಣುವಂತೆಮಗಿಲ್ಲ!

(ಎರಡು ಪಾಲಾಗಿ)

೧ನೆಯ ಅರ್ಧ

(ಆಲೋಚಿಸಿ)

ಹೆರರ ತಮ್ಮುನ್ನತಿಕೆಗೆತ್ತಿಕೊಂಬುದೆ ಮಹಾ
ತ್ಮರ ಧರ್ಮ! ಪರರನಡಿಮೆಟ್ಟಿ ದೂರೀಕರಿಸು
ವುದೆ ದುರಾತ್ಮರ ಕರ್ಮ! ನಾವು-ನೀವೆಂಬ ಹಳ
ಭೇದಗಳನುಳಿದು ಸರಿಸಮನೆ ಸೌದರ್ಯದಿಂ
ಸೌಹಾರ್ದದಿಂದೈಕ್ಯದಿಂದೈಕ್ಯಮತ್ಯದಿಂ
ಬಾಳುವುದೆ ತಾಯಿಳೆಯ ಹೆಬ್ಬಾಳಿಕೆಯ ಮರ್ಮ!

೨ನೆಯ ಅರ್ಧ

(ವ್ಯಗ್ರವಾಗಿ)

ಇಲ್ಲಡಾವನ್ಯ ಸಸ್ಯಾಳಿಯಂ ತನ್ನೊಳಗೆ
ಬೆಳೆಯಲೀಯದ ಬಿದಿರುಮೆಳೆ ತನ್ನ ತಿಕ್ಕಾಟ
ದಿಂದ ಸೀವಂತೆ ಒಳಯುದ್ಧದಿಂದಲೊ, ದೇಹ
ದಾರೋಗ್ಯ ಸಡಲಲೊಳವುಗುವ ರೋಗಗಳಂತೆ
ಒಳಗುಂದುವೊಡನೆತ್ತಿ ಬಹ ಹೊರಗಣಭಿಯೋಗ
ದಿಂದಲೊ, ಸಮಾಜ ಹರಿಮುರಿಯಾಗದಿರೆ ಸಲ್ಲ!

(ಎರಡೂ ಪಾಲುಗಳು ಒಟ್ಟಾಗಿ)

ಮಾತೃಭೂ ಪರತಂತ್ರವಾಗದಕಟಿರಲೊಲ್ಲ!
ಸತ್ಯಂ, ತ್ರಿಸತ್ಯಂ ಗಡಾ ಇದರೊಳೆರಡಿಲ್ಲ!

(ತೆರಳುವರು)

ಮುಗಿಯಿತು